16. ನಿಯಮ 69ರ ಅಡಿಯಲ್ಲಿ ಮುಂದುವರೆದ ಚರ್ಚೆ

ವಿಷಯ: ಡಾ: ಡಿ.ಎಂ.ನಂಜುಂಡಪ್ಪ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುವಾಗ ಅನುದಾನ ಹಂಚಿಕೆ ಮಾಡುವಲ್ಲಿ ಪಕ್ಷಪಾತ ಮಾಡಿದ್ದು, ಅದರಿಂದ ಹಿಂದುಳಿದ ಪ್ರದೇಶಗಳಿಗೆ ಆಗುತ್ತಿರುವ ತಾರತಮ್ಯದ ಬಗ್ಗೆ.

ಉಪಾಧ್ಯಕ್ಷರು: ವೈಜನಾಥ್ ಪಾಟೀಲರವರು ಏನೋ ಮಾತನಾಡುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ: ನಾನು 5 ನಿಮಿಷ ಮಾತನಾಡುತ್ತೇನೆ. ಬರೀ ಗುಲ್ಬರ್ಗಾ ಜಿಲ್ಲೆಯವರೆ ಮಾತನಾಡಿದರೆ ಹೇಗೆ? ಬೇರೆ ಜಿಲ್ಲೆಯವರಿಗೂ ಮಾತನಾಡಲು ಕೊಡಿ.

ಉಪಾಧ್ಯಕ್ಷರು: ಅವರು 5 ನಿಮಿಷ ಮಾತನಾಡುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ: ಬೇಡವೆಂದರೆ ಹೊರಟು ಹೋಗುತ್ತೇನೆ, ನನ್ನದೇನೂ ಇಲ್ಲ.

ಉಪಾಧ್ಯಕ್ಷರು: ಯಾರೂ ಬೇಡ ಅನ್ನುತ್ತಾರೆ? ನೀವು ಮಾತನಾಡಿ ಅಂತ ಹೇಳುತ್ತಾ ಇದ್ದೇವೆ. ಅವರು 371ರ ಕಲಂ ಬಗ್ಗೆ ಮಾತನಾಡುತ್ತಾರೆಂದು ಅವರಿಗೆ ನೀವು ಹೆಸರನ್ನು ಇಟ್ಟಿದ್ದೀರಿ. ಪಾಪ ಅವರು ಅಷ್ಟೊಂದು ತಿಳಿದುಕೊಂಡಿರುವವರು ಸ್ವಲ್ಪ ಹೇಳುವುದನ್ನು ಕೇಳುವುದು ಬೇಡವೇ?

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ): ಮಾನ್ಯ ಉಪಾಧ್ಯಕ್ಷರೆ, ಒಂದು ಸಲ ನಂಜುಂಡಪ್ಪನವರು ಗುಲ್ಬರ್ಗಾಕ್ಕೆ ಬಂದಿದ್ದರು. ಆಗ ಸುಮಾರು 200 ಜನ Sub Inspector selection ಆಗಿದ್ದರು. ಅಲ್ಲಿ ಹೋಗಿ ನಾವು ಅವರಿಗೆ ಒಂದು memorandum ನ್ನು ಕೊಟ್ಟೆವು. ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯವರಿಗೆ 200 ರಲ್ಲಿ single digit ಕೂಡ ಹೈದ್ರಾಬಾದ್-ಕರ್ನಾಟಕದವರು select ಆಗಿಲ್ಲವೆಂದು, ಅವರಿಗೆ ಬಹಳ ಆಶ್ಚರ್ಯವಾಯಿತು. ಆಗ ನಮ್ಮಲ್ಲಿ ಪ್ರತೇಕ ರಾಜ್ಯದ ಬಗ್ಗೆ ಖರೆ ಅಂದರೆ ಹೋರಾಟ ಶುರು ಆಗಿತ್ತು. ಆನಂತರ ಅವರು ಕೆಲವೇ ದಿವಸಗಳಲ್ಲಿ ಒಂದು High power Committee Dr. Nanjundappa ಅವರ ನೇತೃತ್ವದಲ್ಲಿ ಸ್ಥಾಪಿಸಿದರು. ಆಗ ಅವರು ಅಧ್ಯಯನ ಮಾಡುವ ಕಾಲಕ್ಕೆ ಆ ಭಾಗದ ಪ್ರತ್ಯೇಕ ರಾಜ್ಯದ

ಹೋರಾಟ suspend ಮಾಡಿಬಿಟ್ಟರು, ಒಳ್ಳೆಯ ವರದಿಯನ್ನು ಕೊಡಬಹುದು ಎಂದು ಆಶೆ ಮಾಡಿದರು. ಅದೇ ದೃಷ್ಟಿಯಿಂದ ಮುಂದೆ ಅವರು ಒಳ್ಳೆಯ ವರದಿಯನ್ನು ಕೂಡ ಕೊಟ್ಟರು. ನಂಜುಂಡಪ್ಪ ಅವರ ಹತ್ತಿರ ನಾವು ಎಷ್ಟೋ ಸಲ ಹೋಗಿದ್ದೇವೆ. ಆಂಧ್ರಪ್ರದೇಶದಲ್ಲಿ ಯಾವ ಪ್ರಕಾರ selection ಪದ್ಧತಿ ಇದೆ, 371 ಕಲಂಗೆ ತಿದ್ದುಪಡಿಯನ್ನು ತಂದಿದ್ದಾರೆ, ಇದೆಲ್ಲದರೆ ಮಾಹಿತಿಯನ್ನು ನಾವು ಅವರಿಗೆ ಕೊಟ್ಟ ನಂತರ ತಮ್ಮ ವರದಿಯಲ್ಲಿ ಸೇರಿಸಿದ್ದಾರೆ. 371 ಕಲಂಗೆ ತಿದ್ದುಪಡಿಯನ್ನು ತರಬೇಕು. ಆಂಧ್ರಪ್ರದೇಶದಂತೆ ಇಲ್ಲಿ ಮಾಡಬೇಕು ಎಂದು ಎಲ್ಲಾ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಆನಂತರ ಆ ಭಾಗದ ಹೈದ್ರಾಬಾದ್-ಕರ್ನಾಟಕ ಹೋರಾಟ ಸಮಿತಿಯವರು ಪ್ರತ್ಯೇಕ ರಾಜ್ಯದ ಚಳುವಳಿಯನ್ನು ಬಿಟ್ಟು 371ನೇ ಕಲಂಗೆ ತಿದ್ದುಪಡಿ ಮಾಡಬೇಕೆಂದು ಹೋರಾಟ ಮಾಡುತ್ತಿದ್ದಾರೆ. 371 ಕಲಂಗೆ ತಿದ್ದುಪಡಿಯನ್ನು ಮಾಡಿದರೆ ಎಷ್ಟೋ ರೋಗಗಳು ತಾನಾಗಿಯೇ ಹೋಗುತ್ತದೆ. Central University ಬರುತ್ತದೆ. ಡಾ. ನಂಜುಂಡಪ್ಪನವರ ವರದಿಯ ಪ್ರಕಾರ ಎಷ್ಟು ಹಣ ಬರಬೇಕು, ಆ ಹಣವೂ ಕೂಡ ತಾನಾಗಿಯೇ ಬರುತ್ತದೆ. ಇವತ್ತು ವಿದರ್ಭದಲ್ಲಿ direct ಆಗಿ Governor ನಿಂದ budget allot ಆಗುತ್ತದೆ. ಅದು State Finance Minister ರವರಿಂದ ಅದು ಆಗುವುದಿಲ್ಲ. ಏಕೆಂದರೆ ಅಲ್ಲಿ 371 ಕಲಂಗೆ ತಿದ್ದುಪಡಿಯನ್ನು ತಂದಿದ್ದಾರೆ. ಅದನ್ನು ತಂದಿರುವುದರಿಂದಲೇ ಇವತ್ತು ಆಂಧ್ರಪ್ರದೇಶದಲ್ಲಿ ಜಿಲ್ಲಾವಾರು ಹಾಗೂ ವಿಭಾಗಮಟ್ಟದಲ್ಲಿ ಸೆಲೆಕ್ಷನ್ ಆಗುತ್ತದೆ. ಅಂತಹ ಪದ್ಧತಿಯನ್ನು ನಮ್ಮಲ್ಲಿ ತನ್ನಿ ಎಂದು ನಾನು ಕೇಳುತ್ತಿದ್ದೇನೆ. ಅದು ಕೇವಲ ಹೈದ್ರಾಬಾದ್-ಕರ್ನಾಟಕ ಸಲುವಾಗಿ ಅಲ್ಲ, ತಪ್ಪು ತಿಳುವಳಿಕೆ ಇದೆ. ಆಂಧ್ರದಲ್ಲಿ ತೆಲಂಗಾಣ ಭಾಗ ಹಳೇ ಹೈದ್ರಾಬಾದ್‌ನ ಜಿಲ್ಲೆಯೊಳಗೆ ಹೋದೆವು. ಹಳೇ ಪದ್ಧತಿ ಪ್ರಕಾರ ಜಿಲ್ಲಾವಾರು selection ಏನು ಆಗುತ್ತಿತ್ತು, ಅದೇ ಜಿಲ್ಲೆಯಲ್ಲಿ ಹುಟ್ಟಿದವರಿಗೆ ಸರ್ಕಾರಿ ನೌಕರಿಗಳು, ಶಿಕ್ಷಣದಲ್ಲಿ ಆಧ್ಯತೆ ಸಿಗುತ್ತಿತ್ತು. ಆ ಆದ್ಯತೆ ಮುಂದುವರೆಯಿತು. ಆಂಧ್ರದಿಂದ ಕರ್ನೂಲ್ ಸೈಡ್, ಕಡಪಾ ಸೈಡ್, ಕೋಸ್ಟಲ್ ಆಂಧ್ರಪ್ರದೇಶ, ರಾಯಲ್ ಸೀಮಾ ಈ ಭಾಗದ ಜನರ domination ಹೆಚ್ಚಾಯಿತು. ಕೊನೆಗೆ ಅವರು High Court ಗೆ case ಹಾಕಿದರು. ಮುಲ್ಕಿ ಪದ್ಧತಿ ಎಂದು ಹಳೇ ಹೈದ್ರಾಬಾದ್ ರಾಜ್ಯದಲ್ಲಿ ಒಂದು ರೂಲ್ ಇತ್ತು. ಅವರು ಕೇಸ್ ಹಾಕಿ Mulki

rules are not valid ಎಂದು ಒಂದು Judgement ಬಂತು. ಆ Judgement ಬಂದಾಗ ತೆಲಂಗಾಣದಲ್ಲಿ ಒಂದು movement ಶುರು ಆಯಿತು. ಆಂಧ್ರಪ್ರದೇಶದ ರಾಜ್ಯ ಸರ್ಕಾರದ ಮುಖ್ಯಮಂತ್ರಿ ಆವತ್ತು ಪಿ.ವಿ.ನರಸಿಂಹರಾವ್‌ರವರು ಇದ್ದರು. ಸರ್ಕಾರದವರೇ ಆ Judgement ವಿರುದ್ಧ Supreme Courtಗೆ appeal ಹೋದರು. Supreme Court ನಲ್ಲಿ ಒಂದು Judgement ಬಂತು. High Court Judgement set aside ಆಯಿತು. ಅಲ್ಲಿ ಏನಾಯಿತು ಎಂದರೆ, Mulki rules are valid, local selections are valid ಎಂದು Supreme Court Judgement ಬಂತು. ಆ Judgement ಬಂದ ನಂತರ ಅದನ್ನು implement ಮಾಡುವುದು ಹೇಗೆ? ಇದರ ಪ್ರಶ್ನೆ ಬಂತು, ಏಕೆಂದರೆ ಅದರ ವಿರುದ್ಧ Mulki rules are valid ಎಂದ ಕೂಡಲೇ ಕೋಸ್ಟಲ್ ಆಂದ್ರಪ್ರದೇಶ, ರಾಯಲ್ ಸೀಮಾ ಈ ಭಾಗದವರು ಹೈದ್ರಾಬಾದ್‌ದಲ್ಲಿ ಹೋಗಿ ಉಳಿಯುವುದು ಹೇಗೆ ಎಂದು problem ಬಂತು. ಅವರು Counter agitation ಶುರು ಮಾಡಿದರು. Separate ಆಂಧ್ರ ಎಂದು. ಕೊನೆಗೆ ಅಂದಿನ ಕೇಂದ್ರ ಸರ್ಕಾರ ಮೂರು ಪ್ರದೇಶದ legislators ಕರೆದು ಒಂದು gentleman agreement ಮಾಡಿದರು. ಆ Mulki rules 371 ಕಲಂಗೆ ಏನು amendment ಮಾಡಬೇಕು, it should be extended to the whole of Andra Pradhesh ಎಂದು ನಿರ್ಣಯವಾಯಿತು. ಆ agreement ಜಾರಿಗೆ ತರುವ ಸಲುವಾಗಿ 371ಕ್ಕೆ ತಿದ್ದುಪಡಿಯನ್ನು ತಂದರು. ಮಹಾರಾಷ್ಟ್ರದಲ್ಲಿ ಕೂಡ 1960 ರಲ್ಲಿ 371ಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಹಳೇ ಹೈದ್ರಾಬಾದ್ ರಾಜ್ಯದ ಹಿಂದುಳಿದ ಪ್ರದೇಶದ ಸಲುವಾಗಿ ಆಂಧ್ರದಲ್ಲಿ ತೆಲಂಗಾಣ ಸಲುವಾಗಿ ಬಂತು, ಮಹಾರಾಷ್ಟ್ರದಲ್ಲಿ ಬಂತು. ಹಳೇ ಹೈದ್ರಾಬಾದ್ ರಾಜ್ಯದಿಂದ ಬಂದ ಹೈದ್ರಾಬಾದ್-ಕರ್ನಾಟಕ ಜಿಲ್ಲೆಯವರಿಗೆ ಆ ಲಾಭ ಸಿಗಲಿಲ್ಲ. ಆದುದರಿಂದ ಇವತ್ತು selection ಪದ್ಧತಿಯಲ್ಲಿ ಈಗಾಗಲೇ ಬಿಲ್ ತಂದರು, ಮಾನ್ಯ ಬಸವರಾಜ ಹೊರಟ್ಟಿಯವರು, ಆ ಭಾಗದಲ್ಲಿ ಯಾರೂ ಶಿಕ್ಷಕರು ಬರುವುದಿಲ್ಲ. ಬೇರೆ servants ಬರುವುದಿಲ್ಲ. ವಿಶೇಷವಾಗಿ ಶಿಕ್ಷಕರು ಬರುತ್ತಿಲ್ಲವೆಂಧು ಶಿಕ್ಷಣ ಹದಗೆಡುತ್ತಿದೆ. Primary level ನಲ್ಲಿ ಶಿಕ್ಷಕರು ಇರುವುದಿಲ್ಲ. ಅವರು ಮುಂದೆ PUC ಯಲ್ಲಿ ಹೇಗೆ marks ತೆಗೆಯುವುದು? ಆ ದೃಷ್ಟಿಯಿಂದ transfer ಮಾಡಬಾರದು ಎಂದು

ಹೊರಟ್ಟಿಯವರು ತಂದಿರುವ ಆ ಬಿಲ್‌ನ್ನು ನಾವು ಸ್ವಾಗತ ಮಾಡಿದ್ದೇವೆ. ಆದರೆ ದುರ್ದೈವದಿಂದ ಕೌನ್ಸಿಲ್‌ದಲ್ಲಿ ಇವತ್ತು ಅದಕ್ಕೆ dilute ಮಾಡಿಬಿಟ್ಟರು. ಮತ್ತೊಂದು ಸಲ ಪಾಸ್ ಮಾಡಿ ಆ ಓರಿಜಿನಲ್‌ನ್ನು ಕಳುಹಿಸಬೇಕು. ಅದಕ್ಕೆ dilute ಮಾಡಿದರು. ಈ ವರ್ಷ 1671 ಕೋಟಿ ರೂ.ಗಳನ್ನು ಕೊಡುತ್ತೇವೆಂದು ರಾಜ್ಯ ಸರ್ಕಾರದವರು ತಮ್ಮ ಬಜೆಟ್‌ನಲ್ಲಿ ಹೇಳಿದ್ದಾರೆ. ಅಷ್ಟು ದುಡ್ಡು ಕೊಡುತ್ತಾರೋ, ಇಲ್ಲವೋ ಗೊತ್ತಿಲ್ಲ. ಅಥವಾ ಈ ವರ್ಷದ ಬಜೆಟ್‌ನಲ್ಲಿ ಏನು ಹಣ ಇಟ್ಟಿದ್ದಾರೆ. ಇದು ಮುಂದಿನ ವರ್ಷದಲ್ಲಿ ಇರುತ್ತದೆಂಥ ಭರವಸೆಯಿಲ್ಲ. ಮುಂದಿನ ವರ್ಷ ಮತ್ತೆ ಬದಲಾವಣೆಯಾಗಬಹುದು. 500 ಕೋಟಿ ಇರಬಹುದು. 100 ಕೋಟಿ ಇರಬಹುದು. ಅದರ ಕಡೆ Contitutional guarantee ಇರಬೇಕಾದರೆ, 371 ಕ್ಕೆ ತಿದ್ದುಪಡಿ ತರಬೇಕು. ಕೇವಲ ಹೈದ್ರಾಬಾದ್ - ಕರ್ನಾಟಕದವರಿಗೆ ಅಲ್ಲ, ಪ್ರತಿ ಜಿಲ್ಲೆಯವರಿಗೆ, ಸ್ಥಳೀಯರಿಗೆ, ಇವತ್ತು ಬೆಂಗಳೂರು, ಮೈಸೂರು ಕೂಡ ಸೇರಬೇಕು. ಕೆಲವು ಜಿಲ್ಲೆಯವರದ್ದು ಬೆಂಗಳೂರಿನಲ್ಲಿ ಪ್ರಭಾವ ಇದ್ದಿರಬಹುದು. ಬಾಕಿ ಎಲ್ಲಾ ಜಿಲ್ಲೆಯ ಪರಿಸ್ಥಿತಿ ಒಂದೇ ಇದೆ. Local recruitment ಆಯಿತು ಎಂದರೆ, ಆಯಾ ಜಿಲ್ಲೆಯವರು ಆಯಾ ಭಾಗದವರು ಅಲ್ಲಿ employment ಪಡೆಯುತ್ತಾರೆ. Medical education ತೆಗೆದುಕೊಳ್ಳಿ, PUC ಗೆ state level merit ಇಟ್ಟಿದ್ದಾರೆ. ಎಲ್ಲಾ ಬೆಂಗಳೂರು-ಮಂಗಳೂರು ಈ ಕಡೆಯವರು ಹೆಚ್ಚು ಮೆರಿಟ್ ತೆಗೆದುಕೊಳ್ಳುತ್ತಾರೆ. Medical and Engineering seat ಈ ಕಡೆಯವರಿಗೆ ಸಿಗುತ್ತವೆ. ನಮಗೆ ಸಿಗುವುದಿಲ್ಲ. ಅದರ ಸಲುವಾಗಿ ಆ ಸೀಟ್ ಹಂಚಿಕೆಯಲ್ಲಿ ಕೂಡ ಅನ್ಯಾಯವಾಗಬಾರದು. ಅದರ ಸಲುವಾಗಿ separate ಆಗಿ PUC Board ಇರಬೇಕು. Gulburga University PUC Board ಬೇರೆ, ಧಾರವಾಡ ಬೇರೆ, ಮೈಸೂರು ಬೇರೆ, ಬೆಂಗಳೂರು ಬೇರೆ ಇರಬೇಕು. ಈ ಪದ್ಧತಿ ಮಹಾರಾಷ್ಟ್ರದಲ್ಲಿ ಇದೆ. PUCಯಲ್ಲಿ local merit ತೆಗೆಯಬೇಕು. ಇವತ್ತು ನಮ್ಮಲ್ಲಿ state level merit, State level CET ಇರುವುದರಿಂದ ನಮಗೆ ಅನ್ಯಾಯವಾಗುತ್ತಿದೆ. ಇದರ ಸಲುವಾಗಿ ಕಲಂ 371ಕ್ಕೆ ತಿದ್ದುಪಡಿ ತಂದರೆ ಮಾತ್ರ ಸಾಧ್ಯವಿದೆ. ಈ ವರ್ಷ 1500 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ.

ಉಪಾಧ್ಯಕ್ಷರು: Beginning ನಿಂದ ಹೇಳುತ್ತಲೇ ಇದ್ದೇನೆ. ಒಬ್ಬೊಬ್ಬರು 10 ನಿಮಿಷಕ್ಕಿಂತ ಹೆಚ್ಚು ಮಾತನಾಡಬೇಡಿ, ಅದೇ ಸಮಯದಲ್ಲಿ brief ಆಗಿ ಹೇಳಿ. ಇನ್ನು 5–6 ಜನ ಮಾತನಾಡುವವರಿದ್ದಾರೆ. ಅವರು ಕೂಡ ನಿಮ್ಮವರು. ಅವರಿಗೆ ನೀವು ಸಹಕಾರ ಕೊಡಬೇಕು, ಅವರು ನಿಮ್ಮ ಪರವಾಗಿ ಮಾತನಾಡುತ್ತಾರೆ. ಒಬ್ಬರೇ ಇಷ್ಟು ಟೈಮ್ ತೆಗೆದುಕೊಂಡರೆ ತೊಂದರೆಯಾಗುತ್ತದೆ.

ಶ್ರೀ ವೈಜನಾಥ್ ಪಾಟೀಲ್: ಆಯಿತು. ಆ ದೃಷ್ಟಿಯಿಂದ regional imbalance ಹೋಗಬೇಕಾದರೆ, Constitution amendment ಆಗಬೇಕು. ಶಿವರಾಜ್ ಪಾಟೀಲ್‌ರವರು ಈಗ ಏನೋ ಒಪ್ಪಿದ್ದಾರೆಂದು ಕೇಳುತ್ತಿದ್ದೇವೆ, ಒಂದು ಕಾಲದಲ್ಲಿ ಬೀದರ್‌ನಲ್ಲಿ ನಾವು ಅವರ effigies ಸುಟ್ಟಿದ್ದೇವೆ. ಅವರು reject ಮಾಡಿ ಕಳುಹಿಸಿದ್ದಾರೆ. ಏಕೆ ಕಳುಹಿಸಿದ್ದಾರೆಂದರೆ, ಇವರು ಒಬ್ಬರಿಗೆ ಕೊಟ್ಟರೆ ಎಲ್ಲರೂ ಕೇಳುತ್ತಾರೆಂದು. ಅಲ್ಲಿ ಜಾರ್ಖಂಡ್‌ದವರು ಒತ್ತಾಯ ತಂದರು ಎಂದು Parliament ನಲ್ಲಿ Bill ತಂದು ಪ್ರತ್ಯೇಕ ರಾಜ್ಯವನ್ನು ಮಾಡಿದರು. ಉತ್ತರಾಂಚಲ ರಾಜ್ಯ ಮಾಡಿದರು. ಅವರು ನಮ್ಮ ಭಾಗಕ್ಕೆ ಸ್ವಲ್ಪ ಸವಲತ್ತನ್ನು ಕೊಡಬೇಕಾದರೆ ಮತ್ತೊಬ್ಬರು ಕೇಳುತ್ತಾರೆಂದರೆ ಏನು ಮಾಡಬೇಕು? ಮತ್ತೊಂದು ಕಡೆ ಬೇಡಿಕೆ ಇದ್ದರೆ ಕೊಡಬೇಕು. ಅವಶ್ಯಕತೆ ಈ ದೇಶದಲ್ಲಿ ಎಲ್ಲೆಲ್ಲಿ ಇದೆ, ಅಲ್ಲಿ ಕೊಡಬೇಕು. ಒಂದು ಸಲ ಅಡ್ವಾಣಿಯವರು ಬಂದರು, ಅವರಿಗೆ ನಾವು ಘೇರಾವ್ ಮಾಡಿದೆವು. ಶಿವರಾಜ್ ಪಾಟೀಲರಿಗೂ protest ಮಾಡಬೇಕಾಯಿತು. ಅವರ ವಿರುದ್ಧವು protest ಮಾಡಿದೆವು. ನಮ್ಮ ಕೆಲವು ಮಿತ್ರರು ಹೇಳಿದರು. ಏಕೆ ಒಪ್ಪುತ್ತಿಲ್ಲವೆಂದರೆ, Home secretary ಯವರು file ಮೇಲೆ ಬರೆದಿದ್ದಾರೆಂದರೆ ಇವರಿಗೆ ಕೊಟ್ಟ ಮೇಲೆ ಬೇರೆಯವರು ಕೇಳಬಹುದು ಎಂದು. ಇದಕ್ಕೆ ಬೇರೆಯವರು ಕೇಳುವ ಪ್ರಶ್ನೆ ಬರುವುದಿಲ್ಲ. ಹಳೇ ಹೈದ್ರಾಬಾದ್ ರಾಜ್ಯದಿಂದ ಬಂದಂಥ ಪ್ರದೇಶಗಳ ಸಲುವಾಗಿ ಮಾತ್ರ ಇದೆ. ಆ ದೃಷ್ಟಿಯಿಂದ Home secretary ಯವರು ಬರೆದಿದ್ದಾರೆಂದರೆ ಅದನ್ನು over rule ಮಾಡಬೇಕೆಂದು ಹೇಳಿದೆವು. ಅಲ್ಲಿ IAS Officers File ಮೇಲೆ ಏನು ಬರೆಯುತ್ತಾರೆ ಅದನ್ನೇ ಅವರು ಕೇಳಬೇಕಾದರೆ, ನಾವೆಲ್ಲಾ ಇಲ್ಲಿ ಚುನಾಯಿಸಿ ಏಕೆ ಬರಬೇಕು? ನಾವು ಪಾರ್ಲಿಮೆಂಟ್ ಮತ್ತು ಅಸೆಂಬ್ಲಿಗೆ ಆರಿಸಿ ಏಕೆ ಬರಬೇಕು? IAS

Officers, Home secretary ಅವರೇನು ಹೇಳುತ್ತಾರೆ ಅದನ್ನೆ ಕೇಳಬೇಕೆಂದು ನಮ್ಮನ್ನು ಜನ ಆರಿಸಿ ಕಳುಹಿಸಿಲ್ಲ. IAS Officers, Home secretary ಏನು ಬರೆಯುತ್ತಾರೆ ಅದನ್ನು over rule ಮಾಡಬೇಕಾಗುತ್ತದೆ. ನಮ್ಮನ್ನು ಜನರು ಆರಿಸಿ ಕಳುಹಿಸಿರುವುದು. Home secretary ಯವರು Home minister ಅನ್ನು ಆರಿಸಿ ಕಳುಹಿಸಿಲ್ಲ. ನಾವು ಇಲ್ಲೇನು ಅನ್ಯಾಯವಾಗುತ್ತಿದೆ ಅದನ್ನು ಸರಿಪಡಿಸಿ ಎಂದು ನ್ಯಾಯ ಕೇಳುತ್ತಿದ್ದೇವೆ. ಅದನ್ನು ಸರಿಪಡಿಸಿ ಎಂದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಕ್ಕೆ ನಾವು ಅಪೀಲ್ ಮಾಡುತ್ತಿದ್ದೇವೆ. ನಮ್ಮ ಸದನದಿಂದ ಒಂದು Resolution ಅನ್ನು ಮಾನ್ಯ ಎಸ್.ಎಂ.ಕೃಷ್ಣರವರು ಇದ್ದಾಗ ನಿಯಮ 371ಕ್ಕೆ ತಿದ್ದುಪಡಿ ಮಾಡಬೇಕೆಂದು ಆಯಿತು. ಆಗ ಒಂದು ಡೆಲಿಗೇಷನ್ ಸಹ ಹೋಯಿತು, ಹಾಗೆಯೇ ಶ್ರೀ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗಲೂ all party delegation ಹೋಯಿತು. ಒಂದು ಡೆಲಿಗೇಷನ್ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಹೋಗಬೇಕೆಂದು ಈ ಸರ್ಕಾರಕ್ಕೂ ನಾವು ಕೇಳುತ್ತಿದ್ದೇವೆ. ಕಲಂ 371ರ ಬಗ್ಗೆ ಹೊಸ ಸರ್ಕಾರದವರ ನೀತಿ ಏನಿದೆ ಎಂದು ಹೇಳಬೇಕು. ಕೇಂದ್ರ ಸರ್ಕಾರದವರು 371ಕ್ಕೆ ತಿದ್ದುಪಡಿಯನ್ನು ಯಾವ ತರಹ ಆಂಧ್ರಪ್ರದೇಶಕ್ಕೆ ಮಾಡಿಕೊಟ್ಟರೋ ಆ ತರಹ ನಮಗೂ ಮಾಡಿ ಕೊಡುತ್ತಾರೋ ಇಲ್ಲವೋ ಎಂದು ಕೇಳಬೇಕು. ಇದನ್ನು ಮಾಡದೇ ಹೋದರೆ ಬಹಳ ದಿವಸಗಳವರೆಗೆ ಇದು ನಡೆಯುವುದಿಲ್ಲ. ಪುನಃ ಪುನಃ ಮಾಡುತ್ತೇವೆ ಎಂದು ಭರವಸೆಯನ್ನು ಕೊಡುತ್ತಿದ್ದಾರೆ. ಇದು ನಡೆಯುತ್ತಿದೆ. ಶ್ರೀ ಬಿ.ಆರ್.ಪಾಟೀಲರು ಹೇಳಿದಂತೆ ಇದು ಒಡಕಿನದು ಅಂದರೆ ಅದು separate ರಾಜ್ಯ. ಇಂಥ issues ಬರುತ್ತವೆ. ಅದನ್ನು avoid ಮಾಡುವ ಸಲುವಾಗಿ ಎಲ್ಲಾ ಪಕ್ಷದವರಿಗೆ ವಿಶೇಷವಾಗಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಇಬ್ಬರಿಗೂ ನಾವು ಕೇಳುತ್ತಿದ್ದೇವೆ. ಇದೊಂದು ನಮ್ಮ ಜನಾಂಗದ ಬೇಡಿಕೆಯಾಗಿದೆ. ಆ ದೃಷ್ಟಿಯಿಂದ ಕಲಂ 371ಕ್ಕೆ ತಿದ್ದುಪಡಿ ಮಾಡಿದರೆ ನಂಜುಂಡಪ್ಪ ವರದಿಯ ಪ್ರಕಾರ ನಮ್ಮ ಭಾಗಕ್ಕೆ ಒಂದಷ್ಟು ಹಣ ಬರುತ್ತದೆ. ಅದನ್ನು ಮುಂದಿನ ವರ್ಷದಿಂದ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈ ವರ್ಷ ಏನು ಹೇಳಿದ್ದಾರೆ ಅಷ್ಟು ಕೊಟ್ಟಿಲ್ಲ. ಮುಂದಿನ ವರ್ಷ ಅಷ್ಟು ಹಣವನ್ನು ಕೊಡುವುದಿಲ್ಲ. HKDB ಯಿಂದ ಹಣ ಬರುತ್ತದೆ. ಅವರೆಷ್ಟು ಹಣವನ್ನು ಕೊಡುತ್ತಾರೋ

ಅಷ್ಟು ಹಣವನ್ನು ಕೊಡಿ. ಅದಕ್ಕೆ legal sanctity ಇಲ್ಲ. Amendment ಆದರೆ ಮಾತ್ರ ಸಾಧ್ಯವಿದೆ. ಅದೇ ರೀತಿ employment and education ನಲ್ಲಿ ಕೂಡ reservation ಬೇಕಾದರೆ, 371ಕ್ಕೆ ತಿದ್ದುಪಡಿ ತರಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಬಸವರಾಜ ರಾಯರೆಡ್ಡಿ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ): ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ಪ್ರಾದೇಶಿಕ ಅಸಮತೋಲನಾ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ. ಈಗ ನಾವು ಸುವರ್ಣ ಕರ್ನಾಟಕವೆಂದು ಆಚರಿಸುತ್ತಿದ್ದೇವೆ. 1956ರ ನವೆಂಬರ್ 1 ರಂದು ಎಲ್ಲಾ ವಿವಿಧ ಭಾಗಗಳೂ ಸೇರಿ ಕರ್ನಾಟಕವಾಯಿತು. ಅದರಲ್ಲಿ ನಮ್ಮ ಹೈದ್ರಾಬಾದ್ ಕರ್ನಾಟಕದ ನಾಲ್ಕು ಜಿಲ್ಲೆಗಳು ಬಂದು ಹಳೇ ಮೈಸೂರಿನ ಭಾಗಕ್ಕೆ ಸೇರಿತು. ಬಾಂಬೆ ಕರ್ನಾಟಕವೂ ಬಂದು ಸೇರಿತು, ಇವೆಲ್ಲಾ ಗೊತ್ತಿರುವ ವಿಚಾರವಾಗಿದೆ. ಆದರೆ ಈ ಒಂದು ಏಕೀಕರಣ ಕೇವಲ ಒಂದು ಕಲೆ, ಸಂಸ್ಕೃತಿ, ಸಾಹಿತ್ಯ ಮತ್ತು ಭಾಷೆಗೆ ಮಾತ್ರ ಸೀಮಿತವಾಗಿತ್ತು. ಭಾಷೆಗೆ ಮಾತ್ರ ಸೀಮಿತವಾಗಿ ಏಕೀಕರಣವಾಯಿತೇ ಹೊರತು, ಸಮಾನತೆಯಿಂದ ಎಲ್ಲಾ ಪ್ರದೇಶಗಳನ್ನು ನೋಡಲಿಕ್ಕೆ ಇನ್ನೂ ಕೂಡ ಏಕೀಕರಣವಾಗದಿರುವುದು ಬಹಳ ದುರದೃಷ್ಟಕರ. ಸುಮಾರು 50 ವರ್ಷಗಳು ಕಳೆದರೂ ಕೂಡ ನಮ್ಮ ರಾಜ್ಯದಲ್ಲಿ ಬಹಳಷ್ಟು ತಾಲ್ಲೂಕುಗಳು ಮತ್ತು ಬಹಳಷ್ಟು ಜಿಲ್ಲೆಗಳು ಅಸಮಾನತೆಯನ್ನು ಹೊಂದಿವೆ. ಇದಕ್ಕಾಗಿ 1980ರ ದಶಕದಲ್ಲಿ ಈ ಒಂದು ಅಸಮಾನತೆಯನ್ನು ಹೋಗಲಾಡಿಸಬೇಕೆಂದು ಅಂದಿನ ಮುಖ್ಯಮಂತ್ರಿಗಳಾದಂಥ ಶ್ರೀ ಗುಂಡೂರಾವ್‌ರವರು ಇಂದಿನ ವಿರೋಧ ಪಕ್ಷದ ನಾಯಕರಾಗಿರುವ ಮಾನ್ಯ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದರು. ಅದು ಕೇವಲ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಮಾತ್ರ ಸೀಮಿತವಾಗಿತ್ತು. ಸನ್ಮಾನ್ಯ ಶ್ರೀ ಧರ್ಮಸಿಂಗ್‌ರವರು ಅಪಾರ ಅನುಭವವನ್ನು ಹೊಂದಿದ್ದಾರೆ. ಅವರ ಆಡಳಿತದ ಚಾಕಚಕ್ಯತೆಯನ್ನು ಬಳಸಿಕೊಂಡು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿಯ ಸಲುವಾಗಿ ಬಹಳ ಒಳ್ಳೆಯ ವರದಿಯೊಂದನ್ನು

ಮಾನ್ಯ ಧರಂಸಿಂಗ್‌ರವರು ಕೊಟ್ಟರು. ವರದಿಯನ್ನು ಕೊಟ್ಟ ನಂತರ ಬೇರೆ ಸರ್ಕಾರ ಬಂತು. ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರ ನಾಯಕತ್ವದಲ್ಲಿ ಮುಂದೆ ಎಸ್. ಆರ್. ಬೊಮ್ಮಾಯಿಯವರು ಅದಕ್ಕೊಂದು ರೂಪುರೇಷೆಯನ್ನು ಕೊಟ್ಟರು, ಮಾನ್ಯ ವೀರೇಂದ್ರ ಪಾಟೀಲರು ಅದಕ್ಕೆ ಸ್ವಲ್ಪ ಹಣವನ್ನು ಒದಗಿಸಿದ್ದರಿಂದ ಧರಂಸಿಂಗ್‌ರವರ ಶಿಫಾರಸ್ಸಿನ ಮೇರೆಗೆ ಏನು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ರಚನೆಯಾಗಿತ್ತು, ಅದರಂತೆ ಆಗ ಕೆಲಸ ಪ್ರಾರಂಭವಾಗಿತ್ತು. ಶ್ರೀ ಧರಂಸಿಂಗ್‌ರವರು ಸವಿಸ್ತಾರವಾಗಿ ಆ ಪ್ರದೇಶಕ್ಕೆ ಎಷ್ಟು ಹಣವನ್ನು ಕೊಡಬೇಕೆಂದು ಹೇಳಿದ್ದರು, ಆವತ್ತು ಅದರ ಬಗ್ಗೆ ವೈಜ್ಞಾನಿಕವಾಗಿ ಚಿಂತನೆ ಆಗಲಿಲ್ಲ. ಅವರ ಶಿಫಾರಸ್ಸಿನ ಮೇರೆಗೆ ಕೇಳಿದಷ್ಟು ಹಣ ಬಿಡುಗಡೆಯಾಗಲಿಲ್ಲ. ಹೀಗಾಗಿ ಇನ್ನೂ ಕೂಡ ಈ ಪ್ರದೇಶ ಹಿಂದುಳಿಕೆಗೆ ಕಾರಣವಾಯಿತು. ಅಧ್ಯಕ್ಷರೆ, ತಮಗೆ ಗೊತ್ತಿದೆ. ಈ ಹೈದ್ರಾಬಾದ್ ಕರ್ನಾಟಕಕ್ಕೆ ದುಸ್ಥಿತಿ ಇದೆ. ಅದರ ಬಗ್ಗೆ ವಿಶೇಷವಾಗಿ ಮಾನ್ಯ ಬಿ.ಆರ್.ಪಾಟೀಲ್‌ರವರು ಹೇಳಿದಂತೆ 39 ತಾಲ್ಲೂಕುಗಳಲ್ಲಿ 21 ತಾಲ್ಲೂಕುಗಳು ಹಿಂದುಳಿದಿವೆ. ಅದರಲ್ಲಿ ದೇವದುರ್ಗ, ಯಲಬುರ್ಗಾ ಮತ್ತು ಅಫಜಲ್‌ಪುರ ಇವು ಅತ್ಯಂತ ಹಿಂದುಳಿದ ತಾಲ್ಲೂಕುಗಳು. ನಾನೇನು ಪ್ರತಿನಿಧಿಸಿದ್ದೇನೆ, backward ನಲ್ಲಿ ನಾನು 37ನೇ ನಂಬರನಲ್ಲಿದ್ದೇನೆ. ಅಷ್ಟು ಹಿಂದುಳಿದಂತಹ ತಾಲ್ಲೂಕು ನನ್ನದು. ದೇವದುರ್ಗ ಮತ್ತು ಅಫಜಲ್‌ಪುರ ತಾಲ್ಲೂಕುಗಳನ್ನು ನಾವು ಈ ಹಳೇ ಮೈಸೂರಿನ ಬೆಂಗಳೂರು, ಮೈಸೂರು, ಮಂಗಳೂರು, ಮಡಿಕೇರಿಗೆ ಹೋಲಿಸಲಿಕ್ಕೆ ಸಾಧ್ಯವಿಲ್ಲ. ಇವತ್ತು ಅಧ್ಯಕ್ಷರೆ, ಸಮಾನತೆಯಿಂದ ಈ ಎಲ್ಲಾ ತಾಲ್ಲೂಕುಗಳು ಅಭಿವೃದ್ಧಿಯಾಗಬೇಕು. ಅದಕ್ಕಾಗಿಯೇ ಶ್ರೀ ಎಸ್.ಎಂ.ಕೃಷ್ಣರವರ ನಾಯಕತ್ವದ ಸರ್ಕಾರ ಡಾ: ನಂಜುಂಡಪ್ಪನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿ ಪ್ರಾದೇಶಿಕ ಅಸಮತೋಲನಾ ಕೇವಲ ಹೈದ್ರಾಬಾದ್ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ, ನಮ್ಮ ರಾಜ್ಯದ ಬೇರೆ ಬೇರೆ ಪ್ರದೇಶಗಳೂ ಕೂಡ ಅಭಿವೃದ್ಧಿಯಲ್ಲಿ ಹಿಂದುಳಿದಿವೆ, ಇದರ ಬಗ್ಗೆ ಸಮಗ್ರವಾಗಿ ಅಧ್ಯಯನ ಆಗಬೇಕೆಂದು ಆ ಸಮಿತಿಯನ್ನು ಮಾಡಿದ್ದು ಬಹಳ ಒಳ್ಳೆಯದಾಯಿತು. ಹಾಗಾಗಿ ಡಾ:ನಂಜುಂಡಪ್ಪನವರು ರಾಜ್ಯದ ಎಲ್ಲಾ ಪ್ರದೇಶಗಳನ್ನು ವಿಚಾರ ಮಾಡಿ ಒಂದು ಸಮಗ್ರವಾದಂತಹ ವರದಿಯನ್ನು ತಯಾರು ಮಾಡಿದ್ದಾರೆ. ಹೈದ್ರಾಬಾದ್ ಕರ್ನಾಟಕದ ಜೊತೆಗೆ

ಹಳೆ ಮೈಸೂರಿನಲ್ಲಿ ಎಷ್ಟು ತಾಲ್ಲೂಕುಗಳು ಹಿಂದುಳಿದಿವೆ ಎನ್ನುವಂತಹ ವಿಚಾರವನ್ನು ಕೊಟ್ಟಿದ್ದಾರೆ, ಅದರಲ್ಲಿ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ 1999 ಮಾನವನ ಅಭಿವೃದ್ಧಿ ಸೂಚಿ ಮತ್ತು ಇತ್ತೀಚೆಗೆ latest 2001 ಸನ್ಮಾನ್ಯ ಮುಖ್ಯಮಂತ್ರಿಗಳಾಗಿ ಕುಮಾರಸ್ವಾಮಿಯವರು, ಸನ್ಮಾನ್ಯ ಉಪಮುಖ್ಯಮಂತ್ರಿಗಳಾಗಿ ಯಡಿಯೂರಪ್ಪನವರು ಅಧಿಕಾರಕ್ಕೆ ಬಂದ ನಂತರ Human Development Index ಅನ್ನು ಬಿಡುಗಡೆ ಮಾಡಿದರು. ಆ 2001 ರ ಸೂಚಿಯ ಪ್ರಕಾರ 20 marks ಗಿಂತ ಅಭಿವೃದ್ಧಿಯ ವಿಚಾರದಲ್ಲಿ ಯಾವ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕು ಆಗಿದೆ ನೋಡಿ. ಇಡೀ ಹಳೆಯ ಮೈಸೂರಿನಲ್ಲಿ ಚಾಮರಾಜನಗರ ಅತ್ಯಂತ ಹಿಂದುಳಿದ ಪ್ರದೇಶ, ಅದು 25 marks ಹೊಂದಿದೆ. ಅದೇ ರೀತಿ ಬಾಗಲಕೋಟೆ–22, ಬೆಳಗಾಂ–08, ಬಿಜಾಪುರ–23, ಹಾವೇರಿ–20, ಧಾರವಾಡ, ಗದಗ್ 10ರ ಸಮೀಪವಿದೆ. ಬೀದರ್–21, ಗುಲ್ಬರ್ಗಾ–26, ರಾಯಚೂರು–27, ಕೊಪ್ಪಳ–24, ಬಳ್ಳಾರಿ–18. ಅಂದರೆ ಈ ಮಾನವ ಅಭಿವೃದ್ಧಿ ಸೂಚಿಯನ್ನು ನೋಡಿದರೆ ಗೊತ್ತಾಗುತ್ತದೆ, ಹಳೆಯ ಮೈಸೂರಿನಲ್ಲಿ ಅತ್ಯಂತ ಹಿಂದುಳಿದ ಪ್ರದೇಶ ಚಾಮರಾಜನಗರ ಆಗಿದ್ದರೆ, ಹೈದ್ರಾಬಾದ್ ಕರ್ನಾಟಕದಲ್ಲಿ ಎಲ್ಲಾ ಐದು ಜಿಲ್ಲೆಗಳು ಅತ್ಯಂತ ಹಿಂದುಳಿದ ಪ್ರದೇಶಗಳಾಗಿವೆ. ಧಾರವಾಡ, ಬಿಜಾಪುರ ಬಾಗಲಕೋಟೆ ಅತ್ಯಂತ ಹಿಂದುಳಿದಿದೆಯೆಂದು ವೈಜ್ಞಾನಿಕ ವಿಚಾರದಿಂದ ನಮಗೆ ಗೊತ್ತಾಗುತ್ತದೆ. ಹಾಗಾಗಿ ಡಾ: ನಂಜುಂಡಪ್ಪನವರು ವೈಜ್ಞಾನಕವಾಗಿ ಇದನ್ನು ಸರ್ವೆ ಮಾಡಿ, ಒಂದು ವರದಿಯನ್ನು ಕೊಟ್ಟು, ಅದರಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳೆಷ್ಟು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಇದು ಬಹಳ ಪ್ರಮುಖವಾದ ವಿಚಾರವಾಗಿರುವುದರಿಂದ ಇದರ ಬಗ್ಗೆ ನಾವು ಗಮನಹರಿಸಲೇಬೇಕಾಗುತ್ತದೆ. ಇವತ್ತು ಬೆಂಗಳೂರು ವಿಭಾಗದಲ್ಲಿ ಅಭಿವೃದ್ದಿ ಹೊಂದಿದ ತಾಲ್ಲೂಕುಗಳು 18. ಅಭಿವೃದ್ಧಿ ಹೊಂದದ ತಾಲ್ಲೂಕುಗಳು 33. ಮೈಸೂರು ವಿಭಾಗದಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು 22. ಅಭಿವೃದ್ದಿ ಹೊಂದದಿರುವುದು 22. ಅಂದರೆ ದಕ್ಷಿಣ ಕರ್ನಾಟಕದ ಪ್ರದೇಶದಲ್ಲಿ ಒಟ್ಟು 40 ತಾಲ್ಲೂಕುಗಳು ಮಾತ್ರ ಅಭಿವೃದ್ಧಿ ಹೊಂದಿವೆ. ಇನ್ನು 55 ತಾಲ್ಲೂಕುಗಳು ಅಭಿವೃದ್ಧಿಯಾಗಿಲ್ಲ, ಅದೇ ರೀತಿ ಉತ್ತರ ಕರ್ನಾಟಕದಲ್ಲಿರುವ ಬೆಳಗಾವಿಯಲ್ಲಿ 18 ತಾಲ್ಲೂಕುಗಳು ಅಭಿವೃದ್ಧಿ ಹೊಂದಿವೆ. 31 ತಾಲ್ಲೂಕುಗಳು ಅಭಿವೃದ್ಧಿಯನ್ನು ಹೊಂದಿಲ್ಲ.

ಗುಲ್ಬರ್ಗಾ ವಿಭಾಗದಲ್ಲಿ ಅಭಿವೃದ್ಧಿ ಹೊಂದಿರುವುದು ಕೇವಲ ಮೂರು ತಾಲ್ಲೂಕುಗಳು, 18 ತಾಲ್ಲೂಕುಗಳು ಇನ್ನು ಅಭಿವೃದ್ಧಿ ಹೊಂದಿಲ್ಲ. ಹೀಗಾಗಿ ಉತ್ತರ ಕರ್ನಾಟಕದಲ್ಲಿ ಕೇವಲ 21 ತಾಲ್ಲೂಕುಗಳು ಅಭಿವೃದ್ಧಿ ಹೊಂದಿದ್ದರೆ, 59 ತಾಲ್ಲೂಕುಗಳು ಅಭಿವೃದ್ಧಿ ಹೊಂದದಿರುವುದು ಅಂದರೆ ಇದರ ಅರ್ಥ ಇಡೀ ಕರ್ನಾಟಕವನ್ನು ಹೋಲಿಕೆ ಮಾಡಿದರೆ ಒಟ್ಟು 114 ತಾಲ್ಲೂಕುಗಳು ಹಿಂದುಳಿದಂಥ ತಾಲ್ಲೂಕುಗಳಾಗಿವೆ ಎಂದು ಡಾ: ನಂಜುಂಡಪ್ಪನವರ ವರದಿ ಆಧಾರಿತವಾಗಿ ಮಾಡಿದ್ದಾರೆ. ಈ ಕೋಷ್ಟಕದಿಂದ ನಮಗೆ ಸ್ಪಷ್ಟವಾಗುತ್ತದೆ. ರಾಜ್ಯದ ಒಟ್ಟು 175 ತಾಲ್ಲೂಕುಗಳ ಪೈಕಿ ಕೇವಲ 61 ತಾಲ್ಲೂಕುಗಳು ಮಾತ್ರ ಅಭಿವೃದ್ಧಿಯಾಗಿವೆ. ಇದರಲ್ಲಿ ದಕ್ಷಿಣ ಕರ್ನಾಟಕದಲ್ಲಿ ಶೇಕಡ 66% ರಷ್ಟು ತಾಲ್ಲೂಕುಗಳು ಮಾತ್ರ ಅಭಿವೃದ್ಧಿಯಾಗಿವೆ. ಉತ್ತರ ಕರ್ನಾಟಕದಲ್ಲಿ ಶೇಕಡ 34% ರಷ್ಟು ತಾಲ್ಲೂಕುಗಳು ಅಭಿವೃದ್ಧಿಯನ್ನು ಹೊಂದಿವೆ. ಅಭಿವೃದ್ಧಿ ಹೊಂದದ ತಾಲ್ಲೂಕುಗಳೆಂದರೆ, 114 ತಾಲ್ಲೂಕುಗಳಲ್ಲಿ ದಕ್ಷಿಣ ಕರ್ನಾಟಕದಲ್ಲಿರುವ ತಾಲ್ಲೂಕುಗಳ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. ಅಭಿವೃದ್ಧಿ ಹೊಂದದ ತಾಲ್ಲೂಕುಗಳನ್ನು ಮೂರು ಗುಂಪುಗಳನ್ನಾಗಿ ಮಾಡಿದ್ದಾರೆ. ಹಿಂದುಳಿದ ತಾಲ್ಲೂಕು, ಅತಿ ಹಿಂದುಳಿದ ತಾಲ್ಲೂಕು ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕು. ಅಧ್ಯಕ್ಷರೆ, ಅಲ್ಲಿಯೂ ನೋಡಿ. ಬೆಂಗಳೂರಿನಲ್ಲಿ ಹಿಂದುಳಿದ ತಾಲ್ಲೂಕುಗಳು 9, ಅತಿ ಹಿಂದುಳಿದ ತಾಲ್ಲೂಕುಗಳು 13, ಅತ್ಯಂತ ಹಿಂದುಳಿದ ತಾಲ್ಲೂಕುಗಳು 11. ಮೈಸೂರು ವಿಭಾಗದಲ್ಲಿ ಹಿಂದುಳಿದ ತಾಲ್ಲೂಕುಗಳು 10, ಅತಿ ಹಿಂದುಳಿದ ತಾಲ್ಲೂಕುಗಳು 10, ಅತ್ಯಂತ ಹಿಂದುಳಿದ ತಾಲ್ಲೂಕುಗಳು 2. ಉತ್ತರ ಕರ್ನಾಟಕಕ್ಕೆ ಬಂದರೆ, ಬೆಳಗಾಂ ವಿಭಾಗದಲ್ಲಿ ಹಿಂದುಳಿದ ತಾಲ್ಲೂಕುಗಳು 14, ಅತಿ ಹಿಂದುಳಿದ ತಾಲ್ಲೂಕುಗಳು 12, ಅತ್ಯಂತ ಹಿಂದುಳಿದ ತಾಲ್ಲೂಕುಗಳು 5. ಗುಲ್ಬರ್ಗಾದಲ್ಲಿ ಹಿಂದುಳಿದ ತಾಲ್ಲೂಕುಗಳು 2, ಅತಿ ಹಿಂದುಳಿದ ತಾಲ್ಲೂಕುಗಳು 5, ಅತ್ಯಂತ ಹಿಂದುಳಿದ ತಾಲ್ಲೂಕುಗಳು 21. ಆದುದರಿಂದ, ಒಟ್ಟು 114 ತಾಲ್ಲೂಕುಗಳಲ್ಲಿ ಹಿಂದುಳಿದ ತಾಲ್ಲೂಕುಗಳು 35, ಅತಿ ಹಿಂದುಳಿದ ತಾಲ್ಲೂಕುಗಳು 40, ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳು 39 ಆಗಿವೆ. ಹೀಗಾಗಿ ಹಿಂದುಳಿದಿರುವಿಕೆಯ ತಾಲ್ಲೂಕುಗಳೇನಿವೆ, ಅದಕ್ಕೆ ಹೇಗಿದೆ ಪಾಲು? ಬೆಂಗಳೂರು ವಿಭಾಗ 25%, ಮೈಸೂರು ವಿಭಾಗ 15%, ಬೆಳಗಾಂ ವಿಭಾಗ

20%, ಗುಲ್ಬರ್ಗಾ ವಿಭಾಗ 40%. ಅಂದರೆ, ಒಟ್ಟಾರೆ ಉತ್ತರ ಕರ್ನಾಟಕದಲ್ಲಿ 60% ತಾಲ್ಲೂಕುಗಳು ಹಿಂದುಳಿದಿರುವಿಕೆಗೆ ಕಾರಣವಾಗಿವೆ. ಈ ಹಿಂದುಳಿದಿರುವಿಕೆಯ ಆಧಾರದ ಮೇಲೆ ಡಾ: ಡಿ.ಎಂ. ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಹಣ ಹಂಚಿಕೆಯಾಗಬೇಕೆನ್ನುವ ವಿಚಾರವನ್ನು ಈಗಾಗಲೇ ಅವರು ಹೇಳಿದ್ದಾರೆ. ಅದಕ್ಕೆ ಅವರು ಏನು ಶಿಫಾರಸ್ಸು ಮಾಡಿದ್ದಾರೆಂದರೆ, 2002 ರಲ್ಲಿ ಡಾ: ಡಿ.ಎಂ.ನಂಜುಂಡಪ್ಪನವರು 2003ನೇ ಇಸವಿಯಿಂದ ಮುಂದಿನ 8 ವರ್ಷಗಳಲ್ಲಿ 114 ತಾಲ್ಲೂಕುಗಳನ್ನು ಸರ್ವಾಂಗೀಣ ಅಭಿವೃದ್ಧಿ ಮಾಡಬೇಕಾಗಿದ್ದರೆ, ಸುಮಾರು 31,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ ಎನ್ನುವಂತಹ ಮಾತುಗಳನ್ನು 2002ರಲ್ಲಿ ಸಲ್ಲಿಸಲಾದ ರಿಪೋರ್ಟ್‌ನಲ್ಲಿ ತಿಳಿಸಿದ್ದಾರೆ. ಅದಕ್ಕೆ 15,000 ಕೋಟಿ ರೂ. regular grant ಮತ್ತು 16,000 ಕೋಟಿ. ರೂ. ವಿಶೇಷ ಅನುದಾನ ಕೊಡಬೇಕೆಂಬ ಮಾತನ್ನೂ ಹೇಳಿದ್ದಾರೆ. ಇತ್ತೀಚೆಗೆ, ಅಂದರೆ, ಈ ವರ್ಷ ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಒಂದು ಪ್ರಯತ್ನ ಮಾಡುವುದಕ್ಕೆ ಯಡಿಯೂರಪ್ಪನವರು ಹೊರಟ್ಟಿದ್ದಾರೆ. ಯಡಿಯೂರಪ್ಪನವರೆ, ಮಾನ್ಯ ಉಪ ಮುಖ್ಯಮಂತ್ರಿಗಳೆ, ತಾವು ಏನು ಮಾಡಲು ಹೊರಟಿದ್ದೀರಿ, ಸಂತೋಷ. ಆದರೆ, ಆ ಹಿಂದುಳಿದಿರುವಿಕೆಯ ತಾಲ್ಲೂಕುಗಳನ್ನು ನೀವು ಸಮಾನತೆಯಿಂದ ನೋಡಬೇಕಾಗುತ್ತದೆ. ನೋಡದಿದ್ದರೆ, ಮತ್ತೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಅದಕ್ಕೋಸ್ಕರ, ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮುಂದಿನ 8 ವರ್ಷಗಳಲ್ಲಿ 31,000 ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡಬೇಕಾಗಿದೆ, ಅದರ inflation ಸಹ ನೋಡಬೇಕಾಗುತ್ತದೆ. ಇವತ್ತು ಹಣದುಬ್ಬರ ನಮ್ಮ ರಾಷ್ಟ್ರದಲ್ಲಿ 4.6%, ಅಂದರೆ, ಹೆಚ್ಚು-ಕಡಿಮೆ 5% ನಷ್ಟು ಹಣದುಬ್ಬರವಿದೆ. ಪ್ರತಿ ವರ್ಷವೂ 5%ನಷ್ಟು ಹಣದುಬ್ಬರವಿದ್ದರೂ ಇನ್ನೂ 10,000 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಂದರೆ, ಸುಮಾರು 40,000 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣ ಬೇಕು. ಅದರ ಬಗ್ಗೆ ಈ ಸರ್ಕಾರ ಗಂಭೀರ ಚಿಂತನೆ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಆದರೆ, ಸರ್ಕಾರ ಗಂಭೀರವಾದ ಚಿಂತನೆ ಮಾಡಿಲ್ಲ. ಅದಕ್ಕೋಸ್ಕರ, 2007-08 ನೇ ಸಾಲಿನಲ್ಲಿ ಡಾ: ಡಿ.ಎಂ.ನಂಜುಂಡಪ್ಪನವರ ವರದಿಯ ಶಿಫಾರಸ್ಸಿನ ಆಧಾರದ ಮೇಲೆ ಈ

ಸಮ್ಮಿಶ್ರ ಸರ್ಕಾರ ಸುಮಾರು 1,571 ಕೋಟಿ ರೂಪಾಯಿಗಳನ್ನು ಮೀಸಲಿಡುತ್ತೇವೆಂದು ಸನ್ಮಾನ್ಯ ಅರ್ಥಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಆದ ಯಡಿಯೂರಪ್ಪನವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಮತ್ತು ಬಜೆಟ್ ಕೂಡ ಪಾಸ್ ಆಗಿದೆ. ಅದರ ಜೊತೆಗೆ, ಈ ಹಣವನ್ನು ಯೋಜನೆಯಲ್ಲಿ ಹಾಕಿದ್ದಾರೆ. ಹಣವನ್ನು ಯೋಜನೆಯಲ್ಲೇ ಹಾಕಬೇಕು ಬೇರೆ ಗತಿಯಿಲ್ಲ. ಹಣವನ್ನು ಯೋಜನೆಯಲ್ಲಿ ಹಾಕಿರುವುದಕ್ಕೆ ನಾನು ಸ್ವಾಗತಿಸುತ್ತೇನೆ. ಏಕೆಂದರೆ, ಇದು plan scheme ನಲ್ಲೇ ಇರಬೇಕು. plan scheme ನಲ್ಲಿದ್ದರೆ, ಹಣ ಬರುವುದು ಸ್ವಲ್ಪ ಹೆಚ್ಚು ಕಡಿಮೆ ಖಾತರಿಯಾಗುತ್ತದೆ. ಅದಕ್ಕೋಸ್ಕರ, plan scheme ನಲ್ಲಿ ಹಾಕಿದ್ದೀರಿ. ಹೀಗಾಗಿ ಇದು ಬಹಳ ಸಂತೋಷದ ವಿಚಾರ. ಆದರೆ, ಈ ಹಣ ಹಂಚಿಕೆ ವಿಚಾರದಲ್ಲಿ ಈ ಸರ್ಕಾರ ದೊಡ್ಡ ತಾರತಮ್ಯವೆಸಗುತ್ತಿದೆ. ಈ ಹಣವನ್ನೆಲ್ಲಾ ಮತ್ತೆ ಈ ಭಾಗಗಳಿಗೆ ಹೋಗುವಂತೆ ಒಂದು ಸೂತ್ರ ಮಾಡಿದ್ದಾರೆ. ಡಾ: ಡಿ.ಎಂ.ನಂಜುಂಡಪ್ಪನವರ ವರದಿ ಆಧಾರದ ಮೇಲೆ ಏನು 40% ಹಿಂದುಳಿದ ತಾಲ್ಲೂಕುಗಳು ನಮ್ಮ ಪ್ರದೇಶದಲ್ಲಿವೆ, ಈ 40%ನಷ್ಟು ಹಣವನ್ನು ಹಂಚಬೇಕಿದ್ದರೆ, ನಮಗೆ ಎಷ್ಟು ಬರುತ್ತದೆ ಎಂದರೆ, ನಮಗೆ ಇವರು 650 ಕೋಟಿ ರೂಪಾಯಿಗಳನ್ನು ಕೊಡಬೇಕು. ಈ 1,571 ಕೋಟಿ ರೂಪಾಯಿಗಳಲ್ಲಿ 40% ನಷ್ಟು ಹಣ ಹೈದ್ರಾಬಾದ್ ಕರ್ನಾಟಕಕ್ಕೇ ಬರಬೇಕಾಗುತ್ತದೆ. ಅಂದರೆ ಸುಮಾರು 650 ಕೋಟಿ ರೂಪಾಯಿಗಳನ್ನು ಕೊಟ್ಟಾಗ ಮಾತ್ರ ಸಾಧ್ಯವಾಗುತ್ತದೆ. ಈಗೇನು 425 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಇದರಿಂದ ಏನೂ ಪ್ರಯೋಜನವಿಲ್ಲ. ಹೀಗಾಗಿ, ಹೆಚ್ಚಿನ ಹಣವನ್ನು ತಾವು ಹೈದ್ರಾಬಾದ್-ಕರ್ನಾಟಕಕ್ಕೆ ಕೊಡಬೇಕು. ಇಲ್ಲದಿದ್ದರೆ, ಇದೆಲ್ಲವೂ ಅಪ್ರಯೋಜನವಾಗುತ್ತದೆ. ಮತ್ತೆ ಸಮಾನತೆ ಹೆಸರಿನಲ್ಲಿ ಅಸಮಾನತೆ ಉಂಟಾಗುತ್ತದೆ. ಮತ್ತೆ ಶೋಷಣೆ ಮುಂದುವರೆಯುತ್ತದೆ. ಆ ಹಿನ್ನೆಲೆಯಲ್ಲಿ ನಾವು ಸರ್ಕಾರವನ್ನು ಒತ್ತಾಯ ಮಾಡುತ್ತೇವೆ. ನೀವು ಹೆಚ್ಚಿನ ಹಣ ಕೊಡಬೇಕು, ಮತ್ತು ಒತ್ತಾಯಕ್ಕೆ ಮಣಿದು ಹಳೆಯ ಮೈಸೂರಿನ ಕೆಲವು ಅಭಿವೃದ್ಧಿ ಹೊಂದಿದ ಜಿಲ್ಲೆಗಳಿಗೆ ಮಾತ್ರ ಕೊಡಬೇಡಿ. ಉದಾಹರಣೆಗೆ, ಚಾಮರಾಜನಗರ ಜಿಲ್ಲೆ ಹಿಂದುಳಿದಿದೆ, ಚಿತ್ರದುರ್ಗ ಮತ್ತು ತುಮಕೂರಿನ ಕೆಲವು ಹಿಂದುಳಿದ ತಾಲ್ಲೂಕುಗಳಿವೆ. ಅಲ್ಲಿಗೂ ಕೂಡ ನೀವು

ಕೊಡಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಹೆಚ್ಚು ಹಣವನ್ನು ನಮ್ಮ ಭಾಗಕ್ಕೆ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜ್ (ಮಾನ್ವಿ): ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಿರಿಯರೆಲ್ಲರೂ ಮಾತನಾಡಿ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಈ ವಿಷಯದಲ್ಲಿ ಈಗಾಗಲೇ ಡಾ:ಡಿ.ಎಂ.ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಗೊಳಿಸುವ ದಿಶೆಯಲ್ಲಿ ನಾನು ಹೈದ್ರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ ಅಧ್ಯಕ್ಷನಾಗಿರುವ ಸಂದರ್ಭದಲ್ಲಿ ನನ್ನನ್ನೂ ಸಹ ಆ ಕಮಿಟಿ ಮುಂದೆ 2-3 ಬಾರಿ ಕರೆಸಿ ಮಾತನಾಡಿರತಕ್ಕಂಥ ಸಂದರ್ಭ ಮತ್ತು ಅವರು ಸರ್ಕಾರಕ್ಕೆ ಸಲ್ಲಿಸಿರುವ ವರದಿ ಬಗ್ಗೆ ಮತ್ತು ಹೈದ್ರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ ವಿಷಯಗಳ ಬಗ್ಗೆಯೂ ಚರ್ಚೆ ಮಾಡಿದ್ದಾರೆ. ಅವರು ಕೊಟ್ಟಿರುವ 114 ತಾಲ್ಲೂಕುಗಳು, ಇಡೀ ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಲ್ಲಿ ಬಂದಿರುವಂಥಾದ್ದು. ಆದರೆ, ಅದರಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳು 39 ರಲ್ಲಿ 29 ತಾಲ್ಲೂಕುಗಳು ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿರುವುದರಿಂದ ಸಹಜವಾಗಿ ಹೆಚ್ಚಿನ ರೀತಿಯಲ್ಲಿ ಡಾ: ಡಿ.ಎಂ. ನಂಜುಂಡಪ್ಪನವರ ವರದಿ ಬಗ್ಗೆ ಹೆಚ್ಚು ಮಾತನಾಡಲು ಹೈದ್ರಾಬಾದ್-ಕರ್ನಾಟಕದ ಜನರ ಪ್ರಯತ್ನವಿದೆ. ಹಾಗಾಗಿ ಇವತ್ತು ಈ ಸರ್ಕಾರ ಈ ಬಜೆಟ್‌ನಲ್ಲಿ 1,570 ಕೋಟಿ ರೂಪಾಯಿಗಳನ್ನು ವಿಶೇಷವಾಗಿ 114 ತಾಲ್ಲೂಕುಗಳಲ್ಲಿ ಖರ್ಚು ಮಾಡಬೇಕೆಂದು ಬಜೆಟ್‌ನಲ್ಲಿ ಕಲ್ಪಿಸಿದ್ದಾರೆ. ಯಾವ ದಿಶೆಯಲ್ಲಿ, ಯಾವ ರೀತಿಯಲ್ಲಿ ನೀವು ಕೊಟ್ಟಿರುವ 114 ತಾಲ್ಲೂಕುಗಳಲ್ಲಿ ಅವರು ತೊಡಗಿಸಿಕೊಂಡು ಇವತ್ತು ಹಣ ಮಂಜೂರು ಮಾಡುತ್ತಿದ್ದಾರೆಂಬುದು ಬಹಳ ಮುಖ್ಯವಾದ ವಿಷಯ. ಇಲ್ಲಿಯವರೆಗೂ ಆಗಿರುವ ಅಸಮತೋಲನ ಜೊತೆಗೆ ಮತ್ತೊಂದು ರೀತಿಯಲ್ಲಿ ಸರ್ಕಾರ implement ಮಾಡುವ ಸಂದರ್ಭದಲ್ಲಿ ಅಸಮತೋಲನವನ್ನು ಮತ್ತಷ್ಟು ಹೆಚ್ಚಿಸುವ ಪ್ರಯತ್ನವನ್ನು ಮಾಡಬಾರದು. ಈಗಾಗಲೇ ಅನೇಕ ಉದಾಹರಣೆಗಳನ್ನು ಮಾನ್ಯ ಸದಸ್ಯರುಗಳಾದ ಬಿ.ಆರ್.ಪಾಟೀಲರು ಮತ್ತು ಬಸವರಾಜ ರಾಯರೆಡ್ಡಿಯವರು ಹೇಳಿದರು. ಇವತ್ತು ನಾನು ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ

ಇತ್ತೀಚೆಗೆ ಡಾ:ಡಿ.ಎಂ.ನಂಜುಂಡಪ್ಪನವರ ವರದಿ ಆಧಾರದ ಮೇಲೆ 1,520 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಕೇವಲ 12 ತಾಲ್ಲೂಕುಗಳಿಗೆ ಕೊಟ್ಟಿದ್ದಾರೆ. 114 ತಾಲ್ಲೂಕುಗಳಲ್ಲಿ ಕೇವಲ 12 ತಾಲ್ಲೂಕುಗಳಿಗೆ 1,520 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಸರ್ಕಾರ ಒಂದು ಆದೇಶ ಮಾಡಿದೆ. ಈ ರೀತಿಯಾಗಿ ಅವರು ಇದರಲ್ಲಿ ಹೆಚ್ಚು-ಕಡಿಮೆ ಮಾಡುವುದರ ಮುಖಾಂತರ ಜನರಲ್ಲಿ ಸಾಕಷ್ಟು ಗೊಂದಲ ಉಂಟು ಮಾಡುವಂತಹ ಅವಕಾಶಗಳಿವೆ. ಹಾಗಾಗಿ, ಇವತ್ತು ಸರ್ಕಾರ ಮುಖ್ಯವಾಗಿ ಬಜೆಟ್ ಕೊಡುವಂತಹ ಸಂದರ್ಭದಲ್ಲಿ ಡಾ:ಡಿ.ಎಂ. ನಂಜುಂಡಪ್ಪನವರ ವರದಿ ಆಧಾರದ ಮೇಲೆ ಇಡೀ 114 ಕ್ಷೇತ್ರಗಳಲ್ಲಿ ಅದರಲ್ಲೂ ಅತಿ ಮುಖ್ಯವಾಗಿ ಅತ್ಯಂತ ಹಿಂದುಳಿದ ತಾಲ್ಲೂಕುಗಳಾಗಿರುವ 39 ತಾಲ್ಲೂಕುಗಳಲ್ಲಿ ಮಾಡುವ ಸಂದರ್ಭದಲ್ಲಿ ಇವತ್ತು ಆ ಕ್ಷೇತ್ರಗಳಲ್ಲಿರುವ ಪರಿಸ್ಥಿತಿ ಏನು? ಇವತ್ತು ಅಲ್ಲಿರುವ pending files ಎಷ್ಟು? ಇವತ್ತು irrigation ಇರಬಹುದು, ಕುಡಿಯುವ ನೀರು ಇರಬಹುದು, Health Departmentಗೆ ಸಂಬಂಧಪಟ್ಟ ಕಾರ್ಯಕ್ರಮಗಳಿರಬಹುದು, roads development ಇರಬಹುದು, industrial development ಇರಬಹುದು, ಈ ರೀತಿಯಲ್ಲಿ ಅನುಮೋದನೆಗಾಗಿ ಸರ್ಕಾರದ ಹತ್ತಿರ ಅನೇಕ ಫೈಲ್‌ಗಳು ಪೆಂಡಿಂಗ್ ಇರುವುದನ್ನು ಆದಷ್ಟು ತೀವ್ರಗತಿಯಲ್ಲಿ ಕ್ಲಿಯರ್ ಮಾಡುವುದರ ಮುಖಾಂತರ ಆಯಾ ತಾಲ್ಲೂಕುಗಳ ಅಭಿವೃದ್ಧಿ ಸಾಧಿಸುವುದಕ್ಕೆ ಒಂದು ಅವಕಾಶವಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಮಾಹಿತಿ ಕೊಟ್ಟು, ಆ ಹಿಂದುಳಿದ ಪ್ರದೇಶಗಳನ್ನು ಸರಿಪಡಿಸಬೇಕಾದರೆ, ನೀರಾವರಿಯಾಗಬೇಕಿರುವ ಅನೇಕ projects ಆ ಪ್ರದೇಶದಲ್ಲಿದೆ. ಆ ನೀರಾವರಿ ಪ್ರಾಜೆಕ್ಟ್‌ಗಳಿಗೆ ಸರಿಯಾದ ರೀತಿಯಲ್ಲಿ ಸಮಯಕ್ಕೆ ಹಣ ಕೊಡದಿರುವ ಕಾರಣ ಇವತ್ತು ನಿಗದಿತ ಸಮಯದಲ್ಲಿ ಆ ಪ್ರಾಜೆಕ್ಟ್‌ಗಳು ಮುಗಿಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಾಕಷ್ಟು ಒಣಭೂಮಿ ಇರುವ ಪ್ರದೇಶಕ್ಕೂ ನೀರಾವರಿ ಒದಗಿಸುವ ಕೆಲಸ ಇವತ್ತು ಮಾಡಬೇಕಾಗಿದೆ. ಅದರ ಜೊತೆಗೆ water-shed programme ಬಗ್ಗೆ ಈಗಾಗಲೇ ಅನೇಕ ಬಾರಿ ಮಾತನಾಡಿದ್ದೇವೆ. ಕೇಂದ್ರ ಸರ್ಕಾರ ಸಹ ಇದಕ್ಕೆ ಸಾಕಷ್ಟು support ಕೊಡತಕ್ಕ ಈ ಸಂದರ್ಭದಲ್ಲಿ 85% ಹಣವನ್ನು ಇವತ್ತು ಕೇಂದ್ರ ಸರ್ಕಾರ ಕೊಡುತ್ತದೆ. ಹಾಗಾಗಿ ಅತಿ ಹೆಚ್ಚು ಒಣಭೂಮಿ ಇರುವ

ನಮ್ಮ ಪ್ರದೇಶದಲ್ಲಿ ಅಂತರ್ಜಲ ಮಟ್ಟವನ್ನು ಉತ್ತಮ ಪಡಿಸುವ ಪ್ರಯತ್ನಕ್ಕೆ ಈ water-shed programme implement ಮಾಡತಕ್ಕ ಪ್ರಯತ್ನ ಮಾಡಬೇಕು. ಅನೇಕ ಪಕ್ಕದ ರಾಜ್ಯದಲ್ಲಿ ಸಾವಿರಾರು ಕೋಟಿಯಲ್ಲಿ ಕೇಂದ್ರ ಸರ್ಕಾರದಿಂದ ಪಡೆದು 7–8 ವರ್ಷಗಳಿಂದ ಅಭಿವೃದ್ಧಿ ಮಾಡಿರುವುದನ್ನು ನಾವು ಇಲ್ಲಿ ಗಮನಿಸಬೇಕು. ಕೈಗಾರಿಕೆ ಬಗ್ಗೆ ಉದಾಹರಣೆಗೆ ಹೇಳಬೇಕಾದರೆ ಅತ್ಯಂತ ಹಿಂದುಳಿದಿರುವ ರಾಯಚೂರು ಜಿಲ್ಲೆಯಲ್ಲಿ ಇರುವಂಥ growth center, ಇವತ್ತು ರಾಜ್ಯದಲ್ಲಿ ಕೇಂದ್ರ ಸರ್ಕಾರದ ಯೋಜನೆಯಿಂದ ಕೇವಲ ಮೂರು ಸೆಂಟರ್‌ಗಳು ಇದೆ, ರಾಯಚೂರು, ಹಾಸನ ಮತ್ತು ಧಾರವಾಡ. ಆದರೆ ಇವತ್ತು ಎಷ್ಟೇ ಪ್ರಯತ್ನ ಮಾಡಿದರೂ ಸರಿಯಾದ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳದ ಕಾರಣ ರಾಯಚೂರು growth center ನಲ್ಲಿ ಎಲ್ಲಾ infrastructure available ಇದ್ದರೂ ಸಹ, ಅಲ್ಲಿ ನೀರು, ವಿದ್ಯುತ್, ರಸ್ತೆ, ಇತರೆ ಸಾಕಷ್ಟು ರೀತಿಯ ಸೌಲಭ್ಯ ಇದ್ದರೂ ಅದನ್ನು ಅಭಿವೃದ್ಧಿ ಪಡಿಸಲು ಪ್ರಯತ್ನ ಮಾಡುತ್ತಿಲ್ಲ. ಅಲ್ಲಿ industries ತರತಕ್ಕ ಪ್ರಯತ್ನ ಇವತ್ತು ಮಾಡುತ್ತಿಲ್ಲ. ಹಾಗಾಗಿ ಇವತ್ತು ನಾವು ಏನೇ ಮಾಡಿದರೂ, ಅಲ್ಲಿಯ ಕಾರ್ಯಕ್ರಮಗಳು ತಕ್ಷಣ implement ಆಗತಕ್ಕ ರೀತಿ ಪ್ರಯತ್ನ ಮಾಡಬೇಕು. ಅದರ ಜೊತೆಗೆ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುವ ಪ್ರಯತ್ನ ಇವತ್ತು ಮಾಡಬೇಕಾಗಿದೆ. ಈ ದಿಸೆಯಲ್ಲಿ ಎಸ್.ಎಂ.ಕೃಷ್ಣರವರ ಸರ್ಕಾರ ಸಾಕಷ್ಟು ರೀತಿ ನಮ್ಮ ಹೈದ್ರಾಬಾದ್ ಕರ್ನಾಟಕದ ಹಿಂದುಳಿದ ಪ್ರದೇಶವಾಗಿರುವ ರಾಯಚೂರು ಜಿಲ್ಲೆಯಲ್ಲಿ mid-day meal ಪ್ರಾರಂಭ ಮಾಡಿರತಕ್ಕದ್ದು ಅನೇಕ ಶಾಲೆಗಳನ್ನು ಪ್ರಾರಂಭ ಮಾಡಿರತಕ್ಕದ್ದು ಸಾಕಷ್ಟು ರೀತಿ ಮುಂದುವರೆಯುವ ಪ್ರಯತ್ನಕ್ಕೆ ಚಾಲನೆ ನೀಡಿದ್ದಾರೆ. ಅಲ್ಲಿ ಇವತ್ತಿನ ಸಂದರ್ಭದಲ್ಲಿ ಈಗಾಗಲೇ ಶ್ರೀಮಾನ್ ಬಿ.ಆರ್. ಪಾಟೀಲರು ಹೇಳಿದಂತೆ, ಇವತ್ತು ಮಾಡಿರತಕ್ಕ ಹೈಸ್ಕೂಲ್‌ಗಳಿರಲಿ, ಜೂನಿಯರ್ ಕಾಲೇಜುಗಳಿರಲಿ, ಡಿಗ್ರಿ ಕಾಲೇಜುಗಳಿರಲಿ ಕೇವಲ ಒತ್ತಾಯದ ಮೇರೆಗೆ, ಮತ್ತು ಅಧಿಕಾರದಲ್ಲಿರತಕ್ಕವರ ಪ್ರಭಾವದ ಮೇಲೆ ಇವತ್ತಿಗೂ ಅದನ್ನು ಅಪ್ರೂವ್ ಮಾಡತಕ್ಕ ಪರಿಸ್ಥಿತಿ ಸರ್ಕಾರದ ಮುಂದಿದೆ. ಹಾಗಾಗಿ ಇವತ್ತು ಮತ್ತೆ imbalanceನ್ನು ಹೆಚ್ಚು ಮಾಡಿದಂತೆ ಆಗುತ್ತದೆ. ಈ ರೀತಿ regional imbalanceನ್ನು ಹೆಚ್ಚು ಮಾಡುವುದರ ಮೂಲಕ ಕ್ಷೇತ್ರ ಕ್ಷೇತ್ರಕ್ಕೂ imbalance ನ್ನು ಜಾಸ್ತಿ ಮಾಡುವ ಮೂಲಕ

ಜನರಲ್ಲಿ ಅಪನಂಬಿಕೆ ಬರತಕ್ಕ ಒಂದು ಪರಿಸ್ಥಿತಿ ಇದೆ. ಹಾಗಾಗಿ ಇವತ್ತು ತಾವು ಇರುವಂಥ pending projects ನ್ನು ಅವುಗಳು ಕುಡಿಯುವ ನೀರು, industries, irrigation projects ಇರಬಹುದು, ಆ ಪ್ರದೇಶದಲ್ಲಿ ಸಾಕಷ್ಟು ರೀತಿ ಪೆಂಡಿಂಗ್ ಇರತಕ್ಕದ್ದನ್ನು ಆದಷ್ಟು ತೀವ್ರದಲ್ಲಿ ಮುಗಿಸತಕ್ಕ ಪ್ರಯತ್ನಕ್ಕೆ ಸರ್ಕಾರ ಹೆಚ್ಚಿನ ಒತ್ತು ನೀಡಬೇಕು. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿರುವ ರೀತಿ ಎಸ್.ಎಂ.ಕೃಷ್ಣರವರ ಸರ್ಕಾರದಲ್ಲಿ ಮೊಟ್ಟಮೊದಲನೆಯದಾಗಿ ವೆಟರ್ನರಿ ಯೂನಿವರ್ಸಿಟಿಯನ್ನು ಬೀದರ್‌ನಲ್ಲಿ ಪ್ರಾರಂಭ ಮಾಡಿದರು. ಮಹಿಳಾ ಯೂನಿವರ್ಸಿಟಿಯನ್ನು ಬಿಜಾಪುರದಲ್ಲಿ ಪ್ರಾರಂಭ ಮಾಡಿದರು. ಆ ದಿಸೆಯಲ್ಲಿ ನಾನು ಎಲ್ಲಾ ಐದೂ ಜಿಲ್ಲೆಯಲ್ಲಿರತಕ್ಕ ಉಸ್ತುವಾರಿ ಮಂತ್ರಿಗಳ ಮೂಲಕ ಮಾತನಾಡಿ ಅಲ್ಲಿರತಕ್ಕ ಜನಪ್ರತಿನಿಧಿಗಳು ನಾವು ರಾಯಚೂರಿನಲ್ಲಿ Agricultural University ಆಗಬೇಕು ಎಂದು ಪ್ರಸ್ತಾವನೆಯನ್ನು ಕೊಟ್ಟಿದ್ದೆವು. ಅದಕ್ಕೆ ತಕ್ಷಣ ಧಾರವಾಡ University vise chancellor ಮೂಲಕ ಆದಷ್ಟು ತೀವ್ರವಾಗಿ ಅದರ ಬಗ್ಗೆ ವರದಿ ಕೊಡಬೇಕೆಂದು ಹೇಳಿ, ಈಗ ಆ ವರದಿ ಸರ್ಕಾರದ ಮುಂದಿದೆ. ಕಳೆದ 18 ತಿಂಗಳಿನಂದ ಅನೇಕ ಬಾರಿ ಈ ವಿಷಯದ ಬಗ್ಗೆ ನಾವು ಪ್ರಸ್ತಾವ ಮಾಡಿದ್ದೇವೆ. ಮಾನ್ಯ ಕೃಷಿ ಸಚಿವರಾದ ಬಂಡೆಪ್ಪ ಕಾಶಂಪುರ್‌ರವರು ಆ ಪ್ರದೇಶಕ್ಕೆ ಬಂದು ಆ ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ ತಕ್ಷಣ ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಮುಖ್ಯಮಂತ್ರಿಗಳು ಆರು ಬಾರಿ ಹೇಳಿದ್ದಾರೆ. ಉಪಮುಖ್ಯಮಂತ್ರಿಯವರು ಸಹ ಬಂದು ಹೇಳಿದ್ದಾರೆ. ಆದರೆ ಇವತ್ತು ಅದನ್ನು ಡಿಲೇ ಮಾಡತಕ್ಕ ರೀತಿಯಲ್ಲಿ ಎಂ.ಪಿ.ಪ್ರಕಾಶ್‌ರವರ ನೇತೃತ್ವದಲ್ಲಿ ಮತ್ತೊಂದು ಉಪ ಸಮಿತಿಯನ್ನು ಮಾಡಿದ್ದಾರೆ. ಅದಕ್ಕೆ ಬೇಕಾಗಿರುವ ಸುಮಾರು ಏಳೂವರೆ ಸಾವಿರ ಎಕರೆ central state farm ಇದೆ. 652 ಎಕರೆ ಕ್ಯಾಂಪಸ್ ಇದೆ. ಬೇಕಾಗಿರುವ infrastructure ಕಟ್ಟಡ, ಲೈಬ್ರರಿ, ಲ್ಯಾಬೋರೇಟರಿ, ಆಡಿಟೋರಿಯಂಗಳು ಎಲ್ಲಾ ಇದ್ದರೂ, ಅಲ್ಲಿ ಕೃಷ್ಣ ಮತ್ತು ತುಂಗಭದ್ರಾ ನದಿಯ ನಡುವೆ ಇರತಕ್ಕ ಹತ್ತು ಲಕ್ಷ ಎಕರೆ ನೀರಾವರಿ ಆಗಿರುವ ಪ್ರದೇಶದಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಮಾಡಿ imbalance ನ್ನು ಸರಿ ಮಾಡಿದಂತೆ ಆಗುತ್ತದೆ, ಕೃಷಿಕರಿಗೆ ಅನುಕೂಲ ಮಾಡಿದಂತೆ ಆಗುತ್ತದೆ, ಅಲ್ಲಿ ಸಾಕಷ್ಟು ಕಾಟನ್ ಬೆಳೆಯುವಂಥದ್ದು, ಸಾಕಷ್ಟು ಭತ್ತ

ಬೆಳೆಯುವಂಥದ್ದು, oil seeds produce ಮಾಡುವಂಥ ಪ್ರದೇಶವಿದೆ, ಹಾಗಾಗಿ ಅಲ್ಲಿ ಒಂದು ಕೃಷಿ ವಿಶ್ವವಿದ್ಯಾನಿಲಯ ಆಗಬೇಕು ಎಂದು ಸಾಕಷ್ಟು ಒತ್ತಡವನ್ನು ಸರ್ಕಾರದ ಮೇಲೆ ತಂದರೂ ಕಳೆದ 15 ತಿಂಗಳಿನಿಂದ ಸರ್ಕಾರ ಕೇವಲ ಆಶ್ವಾಸನೆ ಕೊಡುವುದರ ಮೂಲಕ ಆ ಪ್ರದೇಶವನ್ನು ಸಾಕಷ್ಟು ನಿರ್ಲಕ್ಷ್ಯ ಮಾಡಿದೆ. ಅಲ್ಲಿ ಯಾವ ರೀತಿಯಾಗಿ ವೆಟರ್ನರಿ ಯೂನಿವರ್ಸಿಟಿ, ಮಹಿಳಾ ಯೂನಿವರ್ಸಿಟಿಯಾಗಿ, ಅದೇ ರೀತಿ ಬೀದರ್ ಮತ್ತು ರಾಯಚೂರಿನಲ್ಲಿ ಶ್ರೀಮಾನ್ ಧರ್ಮಸಿಂಗ್‌ರವರ ನೇತೃತ್ವದಲ್ಲಿರುವ ಸರ್ಕಾರದ ಮೂಲಕ ಇವತ್ತು ಮೆಡಿಕಲ್ ಕಾಲೇಜುಗಳು ಸಹ ಪ್ರಾರಂಭವಾಗಿದೆ. ಹಾಗಾಗಿ ಆ ಪ್ರದೇಶದ ಜನರ ಬೇಡಿಕೆ ಕೃಷಿ ವಿಶ್ವವಿದ್ಯಾನಿಲಯ ಮಾಡಬೇಕೆಂದು ಇದೆ. ಅದನ್ನು ಸರ್ಕಾರ ತಕ್ಷಣ ಪ್ರಾರಂಭ ಮಾಡುವ ಪ್ರಯತ್ನ ಮಾಡಬೇಕು. ಅದೇ ರೀತಿ road infrastructure develop ಮಾಡಬೇಕಾಗಿದೆ. ಸಿ.ಆರ್.ಎಫ್. ಅಥವಾ ಪಿ.ಎಂ.ಜಿ.ಆರ್.ವೈ. ನಿಂದ ಆಗಲಿ, ನಬಾರ್ಡ್‌ನಿಂದ ಆಗಲಿ ಬಂದಿರುವ programme ನ್ನು ಹೆಚ್ಚಿನ ರೀತಿಯಲ್ಲಿ ಹಿಂದುಳಿದ ಪ್ರದೇಶದಲ್ಲಿ ಜಾರಿಗೊಳಿಸುವ ಮೂಲಕ ನಮ್ಮ imbalance ನ್ನು ಕಡಿಮೆ ಮಾಡಿ ಆ ಪ್ರದೇಶದ ಜನರಲ್ಲಿ ನಂಬಿಕೆ ಮೂಡಿಸುವ ಪ್ರಯತ್ನ ಈ ಸರ್ಕಾರ ಮಾಡಬೇಕು. ಇನ್ನೂ ಅನೇಕರು ಮಾತನಾಡಬೇಕಾಗಿರುವುದರಿಂದ ಹೆಚ್ಚಿನ ವಿವರಕ್ಕೆ ಹೋಗದೆ Agricultural University ಗೆ ತಕ್ಷಣ ಸರ್ಕಾರ ಒತ್ತು ನೀಡಿ ಆದಷ್ಟು ತೀವ್ರವಾಗಿ ಅದನ್ನು ಪ್ರಾರಂಭ ಮಾಡುವ ಪ್ರಯತ್ನ ರಾಯಚೂರಿನಲ್ಲಿ ಮಾಡಬೇಕು ಎಂದು ಸರ್ಕಾರಕ್ಕೆ ಒತ್ತಾಯ ಮಾಡಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎಸ್. ನಾಡಗೌಡರ್ (ಅಪ್ಪಾಜಿ): (ಮುದ್ದೇಬಿಹಾಳ): ನಮ್ಮ ಸ್ನೇಹಿತರುಗಳಾದ ಬಿ.ಆರ್.ಪಾಟೀಲರು, ರಾಯರೆಡ್ಡಿಯವರು, ಬೋಸರಾಜ್‌ರವರು ಎಲ್ಲರೂ ಮಾತನಾಡಿದ್ದಾರೆ. ಮುಖ್ಯವಾಗಿ ಈ ಹಿಂದುಳಿದಂಥ ಪ್ರದೇಶದ ಅಭಿವೃದ್ಧಿಗೋಸ್ಕರ ತಮಗೆಲ್ಲರಿಗೂ ಗೊತ್ತಿರುವಂತೆ ನಂಜುಂಡಪ್ಪನವರ ವರದಿಯನ್ನು ಆಧಾರವಾಗಿ ಇಟ್ಟುಕೊಂಡು ಮಾತನಾಡಿದ್ದಾರೆ. ನಾನು ಮೂಲತಃವಾಗಿ ಬರುತ್ತೇನೆ. ಬಿಜಾಪುರ ಪ್ರಾಂತ್ಯದ ಹೆಚ್ಚಿನ

ತಾಲ್ಲೂಕುಗಳು ಬಾಂಬೆ ಪ್ರಾಂತ್ಯಕ್ಕೆ ಸೇರಿದಂಥ ತಾಲ್ಲೂಕುಗಳಾಗಿತ್ತು. ಕರ್ನಾಟಕ ಏಕೀಕರಣ ಆಗುವ ಹಂತದಲ್ಲಿ ನಾವು ಕರ್ನಾಟಕದಲ್ಲೇ ಉಳಿಯಬೇಕೆಂದು ಅಪೇಕ್ಷೆಪಟ್ಟವರು ಬಿಜಾಪುರ ಜಿಲ್ಲೆ, ಜಮಖಂಡಿ ತಾಲ್ಲೂಕು, ಹಳೇಬಾಗಲಕೋಟೆ ಮತ್ತು ಬೆಳಗಾಂನ ಕೆಲವೊಂದು ತಾಲ್ಲೂಕಿನ ಜನರು. ಇವತ್ತು ನಮಗೆ ಇದರ ಪರಿಣಾಮ ಏನಾಗಿದೆ ಎಂದರೆ ಎಲ್ಲಾ ರೀತಿಯಿಂದ ಹಿಂದುಳಿದಿರುವಂಥ ಜಿಲ್ಲೆಯಾಗಿ ಇವತ್ತಿಗೂ ಇದೆ. ಅಲ್ಲಿ ಕೈಗಾರಿಕೆ, ನೀರಾವರಿ ಯೋಜನೆಗಳು ಇಲ್ಲ. ಶಿಕ್ಷಣ ಇಲಾಖೆಯಿಂದ, ಇವತ್ತು ಸಚಿವರಾದ ಹೊರಟ್ಟಿಯವರು ಇಲ್ಲಿದ್ದಾರೆ, ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದರು, ಇದು ನಿರಂತರವಾಗಿ ನಡೆಯತಕ್ಕ ಕಾರ್ಯ. ಮೂರು ಕಾಲೇಜುಗಳನ್ನು ಬಿಜಾಪುರದಲ್ಲಿ ಕೊಡುತ್ತಾರೆ. ನೀರಾವರಿ, ಇವತ್ತು ಕೃಷ್ಣಮೇಲ್ದಂಡೆಯ ಯೋಜನೆಯಲ್ಲಿ ನಮ್ಮ plan ಮೂಲಕ 2004ನೇ ಇಸವಿಯಲ್ಲಿ ಸಂಪೂರ್ಣವಾದ ನೀರಾವರಿಯನ್ನು ಮುಳುವಾಡ ಏತ ನೀರಾವರಿಯನ್ನು ಸಹ ಒಂದನೇ ಹಂತದಲ್ಲಿ ಮುಗಿಸಿ ಸುಮಾರು 40 ಸಾವಿರ ಹೆಕ್ಟೇರ್‌ಗೆ ನೀರನ್ನು ಕೊಡಬೇಕಾಗಿತ್ತು. ಆದರೆ ಇವತ್ತು ನಾವು ಅಲ್ಲಿ 20 ಸಾವಿರ ಎಕರೆಗೆ ನೀರನ್ನು ಕೊಟ್ಟಿಲ್ಲ. ಅದರಲ್ಲಿ ಕೂಡ ಈ ವರ್ಷ ಕಡಿತ ಮಾಡಿದ್ದಾರೆ. ನೀರಾವರಿಗೋಸ್ಕರ ಇಟ್ಟ ಹಣದಲ್ಲಿ ಕಡಿತ ಮಾಡಿ ಇವತ್ತು ಮನಸ್ಸಿಗೆ ಇಚ್ಛೆ ಬಂದಂತೆ non-plans schemes ಗೆ ದುಡ್ಡನ್ನು ಕೊಡುತ್ತಾ ಹೋಗಿದ್ದೀರಿ. ಏನು ಇದಕ್ಕೆ ಕಾರಣಗಳು? ನಮ್ಮ ವೈಜನಾಥ್ ಪಾಟೀಲರು ಹೇಳಿದಂತೆ, ಪ್ರತ್ಯೇಕವಾದ ಒಂದು ರಾಜ್ಯ ಬೇಕು ಎಂಬ ಕೂಗು ಏನು ಪ್ರಾರಂಭವಾಗಿದೆ ಇದು ಇದೇ ರೀತಿಯಾದರೆ ಮುಂದೆ ಬರತಕ್ಕ ದಿವಸಗಳಲ್ಲಿ ಪ್ರತ್ಯೇಕವಾದ ರಾಜ್ಯಕ್ಕಾಗಿ ಹೋರಾಟ ಈ ಸದನದಲ್ಲಿ ಆದರೆ ಆಶ್ಚರ್ಯವೇನಿಲ್ಲ. ಈ ರೀತಿ ಆಗಬಾರದು ಎಂದರೆ ನಾವು ಪ್ರತಿಯೊಂದು ಹಿಂದುಳಿದಂತಹ ಪ್ರದೇಶಗಳು ಅದು ಬಿಜಾಪುರ, ರಾಯಚೂರು, ಗುಲ್ಬರ್ಗಾ ಆಗಿರಬಹುದು, ಇವೆಲ್ಲವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುವ ಕಡೆ ಹೆಚ್ಚಿನ ಹಣವನ್ನು ನೀವು ಏಕೆ ನೀಡಿಲ್ಲ? ನಂಜುಂಡಪ್ಪ ವರದಿಯ ಪ್ರಕಾರ ನಾವು ರಸ್ತೆಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಪಿ.ಡಬ್ಲ್ಯೂಡಿ. ರಸ್ತೆಗಳನ್ನು ಎಲ್ಲಿ ಕೊಟ್ಟಿದ್ದೀರಿ? ಅದು ಎಷ್ಟರಮಟ್ಟಿಗೆ ಬಂದಿದೆ? ನಮ್ಮ ಹೊಳೆನರಸೀಪುರ, ಹಾಸನಕ್ಕೆ ಎಷ್ಟು ಹೋಗಿದೆ? ಒಂದು ಕ್ಷೇತ್ರಕ್ಕೆ 75–80 ಲಕ್ಷ ರೂ.ಗಳನ್ನು

ನೀವು ಕೊಡಲು ಆಗಿಲ್ಲ. ಮತ್ತೊಂದು ಕಡೆ ನೂರಾರು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಹೋಗುತ್ತೀರಿ, ಈ ರೀತಿ ಆದರೆ ಸಮಾನವಾಗಿ ಅಭಿವೃದ್ಧಿಯನ್ನು ಮಾಡಲು ಸಾಧ್ಯವೆ? ಇದರ ಬಗ್ಗೆ ನಾವು ಹೆಚ್ಚು ಆಲೋಚನೆ ಮಾಡಬೇಕಾಗಿದೆ. ಈ ಮನೆ ಕೇವಲ ಹೇಳಿಕೆಯನ್ನು ಹೇಳಿಕೊಂಡು ಹೋಗುವ ಮನೆಯಲ್ಲ. ಏನನ್ನು ಹೇಳುತ್ತೇವೆ ಅದನ್ನು ಅನುಷ್ಠಾನಕ್ಕೆ ತರಬೇಕು. ಆಗ ಈ ಮನೆಗೆ ಹೆಚ್ಚಿನ ಗೌರವ ಬರಲು ಸಾಧ್ಯ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇಲ್ಲಿ ಹಣಕಾಸು ಸಚಿವರು ಇದ್ದರು, ಅವರೂ ಹೋದರು. ನಾವು ಯಾರಿಗೆ ಹೇಳಬೇಕೋ ಗೊತ್ತಾಗುತ್ತಿಲ್ಲ. ಯೋಜನಾ ಸಚಿವರು ಇಲ್ಲಿ ಕುಳಿತುಕೊಂಡಿದ್ದಾರೆ.

ಶ್ರೀ ಬಿ. ಆರ್. ಪಾಟೀಲ್: ನಮ್ಮ ಕಡೆ ಒಂದು ಗಾದೆ ಮಾತು ಇದೆ. "ಕೋಣನ ಮುಂದೆ ಕಿನ್ನರಿ ಬಾರಿಸಿದರೆ ಶಂಭು ದೇವರ ಗುಡಿ ಎಲ್ಲಿತ್ತು ಎಂದು ಕೇಳುತ್ತಿತ್ತಂತೆ". ಆ ರೀತಿ ನಾಡಗೌಡರು ಹೇಳುತ್ತಿರುವುದನ್ನು ಯಾರೂ ಕೇಳುತ್ತಿಲ್ಲ.

ಉಪಾಧ್ಯಕ್ಷರು: ಅದು ನಮಗೂ ಗೊತ್ತಿದೆ. ಅದು ಎಲ್ಲಾ ಕಡೆ ಇದೆ.

ಶ್ರೀ ಸಿ.ಎಸ್. ನಾಡಗೌಡರ್ (ಅಪ್ಪಾಜಿ): ಹಾಗಾಗಿ ನಾವು ತಾಳ್ಮೆಯನ್ನು ಕಳೆದುಕೊಂಡಂಥ ಜನಾಂಗವಾಗಿದ್ದೇವೆ, ನಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡಬೇಡಿ. ಮೊನ್ನೆ ದಿವಸ ಅಲ್ಲಿರುವ ಮಹಿಳಾ ವಿಶ್ವವಿದ್ಯಾನಿಲಯವೆಂದು ಪ್ರಾರಂಭ ಮಾಡಿದ ಒಂದು ಸಂಸ್ಥೆಯನ್ನು ಮುಚ್ಚತಕ್ಕ ಹುನ್ನಾರ ನಡೆದಿದೆ ಎಂಬ ಬಗ್ಗೆಯೂ ಕೂಡ ಇಲ್ಲಿ ಪ್ರಸ್ತಾಪ ಮಾಡಲಾಯಿತು. ಬಂಗಾರಪ್ಪನವರು ಇದ್ದಾಗ, ಧರ್ಮಸಿಂಗ್, ಖರ್ಗೆ, ನಮ್ಮ ನೇತಾರರಾದ ದಿವಂಗತ ಬಿ.ಎಂ.ಪಾಟೀಲ್ ಸಾಹೇಬರುಗಳು ನಮ್ಮಲ್ಲಿ ಹೊಸದಾಗಿ ಒಂದು ಕೃಷಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಬೇಕೆಂದು ಪ್ರಸ್ತಾವನೆ ಮಾಡಿ ಅಲ್ಲೊಂದು ಪ್ರತ್ಯೇಕವಾಗಿ ಕಾಲೇಜನ್ನು ಆರಂಭ ಮಾಡಿದರು, ಅದಕ್ಕೆ ಅದರ ಪ್ರಗತಿಗೋಸ್ಕರ ಎಷ್ಟು ಹಣವನ್ನು ಬಿಡುಗಡೆ ಮಾಡಿದಿರಿ? Administrative Building ಗೋಸ್ಕರ 3 ಕೋಟಿ ರೂಪಾಯಿಗಳನ್ನು ಕೇಳಿದರೆ, ಇಲ್ಲಿಯವರೆಗೆ ನೀವು 1 ಕೋಟಿ 25 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದಿರಿ, ಇದನ್ನು ನೀವು ಅಭಿವೃದ್ಧಿ ಎನ್ನುತ್ತೀರಾ? ಅಭಿವೃದ್ಧಿ ಎಂದು ಯಾವ

ಅರ್ಥದಲ್ಲಿ ತಾವು ಹೇಳುತ್ತೀರೋ ನನಗೆ ಅರ್ಥವಾಗುವುದಿಲ್ಲ. ಅದಕ್ಕೆ ದಯವಿಟ್ಟು, ಈ ಸರ್ಕಾರ ಎಚ್ಚರಗೊಳ್ಳಬೇಕು, ಇದನ್ನು ಸರಿಪಡಿಸದೇ ಇದ್ದರೆ ಮುಂದೆ ಬರುವ ದಿವಸಗಳಲ್ಲಿ ಬಹುತೇಕ ಆ ಭಾಗದ ಜನರ ಶಾಪಕ್ಕೆ ಒಳಗಾಗುತ್ತೇವೆನ್ನುವ ಭಾವನೆ ನಮ್ಮಲ್ಲೆಲ್ಲಾ ಬರಬೇಕು. ಕೇವಲ ಅಲ್ಲಿ ಅಪ್ಪಾಜಿಗೆ ಜನರು ಮತ ಹಾಕಿಲ್ಲ, ಬಿಜೆಪಿಯವರು 20,000 ಮತಗಳನ್ನು ತೆಗೆದುಕೊಂಡಿದ್ದೀರಿ, 29,000 ಜೆಡಿ (ಎಸ್) ತೆಗೆದುಕೊಂಡಿದ್ದೀರಿ, ನೀವು ಆ ಜನರಿಗೇನು ನ್ಯಾಯವನ್ನು ಕೊಡುತ್ತೀರಿ? ಆ ಮತಕ್ಷೇತ್ರದಲ್ಲಿ ಒಬ್ಬ ಕಾಂಗ್ರೆಸ್‌ನ ಅಭ್ಯರ್ಥಿ ಗೆದ್ದಿದ್ದಾನೆಂದು ಆ ಕ್ಷೇತ್ರವನ್ನು ಪೂರ್ತಿಯಾಗಿ ಅಲಕ್ಷ್ಯ ಮಾಡಿ ಧಕ್ಕೆ ತರುವುದಾದರೆ ಉಳಿದಂಥ ಜನರಿಗೆ ಏನು ನ್ಯಾಯವನ್ನು ನೀವು ಕೊಡುತ್ತೀರಿ? ಇದು ನಿಮ್ಮ ರಾಜಕೀಯ ತಂತ್ರವೇ? ಅದಕ್ಕೋಸ್ಕರ ರಾಜಕೀಯ ತಂತ್ರವನ್ನು ಬಿಟ್ಟು ಪ್ರಗತಿಯ ಕಡೆಗೆ ಹೆಚ್ಚಿನ ಲಕ್ಷ್ಯವನ್ನು ಕೊಡಿ, ಈ ಪ್ರಾಂತೀಯ ಅಸಮಾನತೆಯನ್ನು ಹೊಗಲಾಡಿಸುವುದಕ್ಕೆ ಕೆಲಸ ಮಾಡಿ. ಮಾನ್ಯ ಹೊರಟ್ಟಿಯವರೆ, ತಾವು ಆ ಭಾಗದಿಂದ ಬರುತ್ತೀರಿ, ಅಲ್ಲಿ ತಾವು ಬಹಳ ಹಿರಿಯ ಮುಖ್ಯ ಸಚಿವರಾಗಿದ್ದೀರಿ, ನಿಮ್ಮ ಧ್ವನಿ ಕುಗ್ಗಿಬಿಟ್ಟರೆ ಹೇಗೆ? ಕೇವಲ ಅಧಿಕಾರಕ್ಕೋಸ್ಕರ ನಿಮ್ಮ ಧ್ವನಿಯನ್ನು ನುಂಗಿ ಕುಳಿತುಬಿಟ್ಟರೆ ಸರಿಯಾಗುವುದಿಲ್ಲ. ನೀವು ಶಿಕ್ಷಕರ ಮೇಲಿದ್ದ ಅಪಾರ ಪ್ರೇಮಕ್ಕೋಸ್ಕರ ಪುನಃ ಪುನಃ 4 ಸಾರಿ ಆರಿಸಿ ಬಂದಿದ್ದೀರಿ. ತಾವು ಇನ್ನು 10 ಸಾರಿ ಆರಿಸಿ ಬನ್ನಿ, ನಮಗೆ ಸಂತೋಷ, ಹಾಗೆ ಎಲ್ಲರೂ ಆ ಭಾಗದ ಅಭಿವೃದ್ಧಿ ಕಡೆಗೆ ಹೆಚ್ಚಿನ ಲಕ್ಷ್ಯವನ್ನು ಕೊಡಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್(ಸೇಡಂ): ಮಾನ್ಯ ಉಪ ಸಭಾಧ್ಯಕ್ಷರೆ, ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಮಾನ್ಯ ಯೋಜನಾ ಸಚಿವರು ಸ್ವಲ್ಪ ಗಮನವಿಟ್ಟು ಕೇಳಬೇಕು, ಡಾ: ನಂಜುಂಡಪ್ಪನವರ ವರದಿ ಅನುಷ್ಠಾನ ಏತಕ್ಕೆ ಅವಶ್ಯಕತೆ ಇದೆ ಎಂದು ಹಿರಿಯ ಎಲ್ಲಾ ಮಾನ್ಯ ಸದಸ್ಯರು ವಿಸ್ತಾರವಾಗಿ ಅಂಕಿ-ಅಂಶಗಳನ್ನು ಕೊಟ್ಟು ಹೇಳಿದ್ದಾರೆ, ನನಗೆ ಸಮಯ ಕಡಿಮೆ ಕೊಟ್ಟಿರುವುದರಿಂದ ಅವರು ಹೇಳಿದ್ದನ್ನು ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಈ ವಿಷಯದಲ್ಲಿ ನಾನು ಯೋಜನಾ ಸಚಿವರ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ, ಅವರು ಗಮನವಿಟ್ಟು ಕೇಳಬೇಕು. ಡಾ:ನಂಜುಡಂಪ್ಪನವರ

ವರದಿಗೆ ಪ್ರತ್ಯೇಕವಾಗಿ ಹಣವನ್ನು ಕೊಡುತ್ತೇವೆ, ಈ ರಾಜ್ಯದ ಆ ಭಾಗದ ಅತ್ಯಂತ ಹಿಂದುಳಿದಿರುವ 39 ತಾಲ್ಲೂಕುಗಳಿಗೆ, ಇನ್ನು ಹಿಂದುಳಿದಿರುವ ಹಾಗೂ ಅತಿ ಹಿಂದುಳಿದ ತಾಲ್ಲೂಕುಗಳಿಗೆ 8 ವರ್ಷಗಳಲ್ಲಿ ಸುಮಾರು 16,000 ಕೋಟಿ ರೂಪಾಯಿಗಳನ್ನು ಕೊಟ್ಟು ಆ ಭಾಗವನ್ನು ಅಭಿವೃದ್ಧಿಪಡಿಸುತ್ತೇವೆನ್ನುವ ಮಾತನ್ನು ನೀವು ಹೇಳಿದ್ದೀರಿ, ಇದನ್ನು ನಾವು ಸ್ವಾಗತ ಮಾಡಿದ್ದೇವೆ. ನಾವು ವಿರೋಧ ಪಕ್ಷದಲ್ಲಿದ್ದರೂ ಯಾವುದೇ ಜನಪರವಾದ ಕೆಲಸವನ್ನು ಮಾಡುವುದಕ್ಕೆ ಸ್ವಾಗತ ಮಾಡುತ್ತೇವೆ. ಆದರೆ ಇವತ್ತು ಬಜೆಟ್ ಭಾಷಣದಲ್ಲಿ ಮಾನ್ಯ ಯಡಿಯೂರಪ್ಪನವರು ಹೇಳಿ 4 ತಿಂಗಳಾಯಿತು, ಯೋಜನಾ ಸಚಿವರು ಇಲ್ಲೇ ಇದ್ದಾರೆ, ನೀವು 1,571 ಕೋಟಿ ರೂಪಾಯಿಗಳನ್ನೇನು ತೆಗೆದಿಟ್ಟಿದ್ದೀರಿ, ಇದರ ಬಗ್ಗೆ ಈವರೆಗೆ ಒಂದಾದರೂ ಸಭೆಯನ್ನು ಮಾಡಿದ್ದೀರಾ ಎಂಬುದು ಮೂಲಭೂತವಾಗಿರುವ ಪ್ರಶ್ನೆ. ಏಕೆಂದರೆ, ಅವತ್ತು ಈ ಸರ್ಕಾರ, ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಹಣ ಕೊಟ್ಟಿದೆ ಎಂಬುದು ಯಾರಿಗೂ ಗೊತ್ತೇ ಇಲ್ಲ. ಈ ಬಗ್ಗೆ ಒಂದು ಸಚಿವ ಸಂಪುಟದ ಉಪಸಮಿತಿಯನ್ನು ಮಾಡಿ ಯಾವುದಾದರೂ ಒಬ್ಬ ಸಚಿವರಿಗೆ ಜವಾಬ್ದಾರಿಯನ್ನು ಕೊಡಬೇಕಾಗಿತ್ತು. ಕೊಟ್ಟಿರುವ ಹಣದಲ್ಲಿ ನಾವು ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೇವೆಂದು ಸಂಬಂಧಪಟ್ಟ ಶಾಸಕರನ್ನು ಕರೆದು ಸಭೆ ಮಾಡಿ, ಯಾವ ರೀತಿಯಾಗಿ ಯೋಜನೆ ಮಾಡಬೇಕೆಂಬುದರ ಗೋಜಿಗೆ ಇವತ್ತು ಸರ್ಕಾರ ಹೋಗಿಲ್ಲ, ಯಾವ ಇಲಾಖೆಗೆ ಎಷ್ಟು ಹಣವನ್ನು ಕೊಟ್ಟಿದ್ದೇವೆನ್ನುವ ಬಗ್ಗೆ ಸ್ಪಷ್ಟತೆ ಇಲ್ಲ. ಇವತ್ತು ಯಡಿಯೂರಪ್ಪನವರು ರೆವ್ಯೂ ಮಾಡಲಿಲ್ಲ. ನೀವು ಕೊಟ್ಟಿರುವ ಹಣ ಸದುಪಯೋಗವಾಗಬೇಕಾಗಿದ್ದರೆ, ಮಾನ್ಯ ರಾಮಚಂದ್ರೇಗೌಡರಾಗಲಿ ಅಥವಾ ಉಪ ಮುಖ್ಯಮಂತ್ರಿಗಳಾಗಲಿ, ನೀವು ಒಂದು ಪ್ರತ್ಯೇಕವಾಗಿರುವ ಸಭೆಯನ್ನು ಕರೆಯಿರಿ, ಎಷ್ಟು ಹಣವನ್ನು ಕೊಟ್ಟಿದ್ದೀರೆಂದು ಸಂಬಂಧಿಸಿದ ಶಾಸಕರೊಡನೆ ಚರ್ಚೆ ಮಾಡಿ, ಅವರ ಸಲಹೆ ಸೂಚನೆಯ ಮೇರೆಗೆ ನೀವು ಅನುಷ್ಠಾನ ಮಾಡಬೇಕು. ಮಾನ್ಯ ಹೊರಟ್ಟಿಯವರೆ, ಇವತ್ತು ಹೈಸ್ಕೂಲ್, ಜೂನಿಯರ್ ಕಾಲೇಜುಗಳನ್ನು ನಮ್ಮ ಭಾಗಗಳಲ್ಲಿ ಕೊಟ್ಟರೂ ಕೂಡ ಜೆಡಿ (ಎಸ್), ಬಿಜೆಪಿ ಎಂದು ಆ ರೀತಿ ತಾರತಮ್ಯವನ್ನು ಮಾಡುವುದಕ್ಕೆ ಹೋಗಬೇಡಿ, ಆಗಿದ್ದನ್ನು ಸರಿಪಡಿಸಿ. ಕೊಟ್ಟಿರುವ ಹಣವನ್ನು ಇದೇ ವರ್ಷ ಉಪಯೋಗ ಮಾಡಲು

ನೀವು ರೆವ್ಯೂ ಮಾಡಿ. ಏಕೆಂದರೆ, ಇದರ ಜಾರಿಯ ಬಗ್ಗೆ, ಹಣಕಾಸನ್ನು ಒದಗಿಸುವುದಕ್ಕಾಗುವುದಿಲ್ಲವೆಂಬ ಬಗ್ಗೆ ನಮಗೆ ಸಂಶಯವಿದೆ, ಸಭೆ ಕರೆದು ರೆವ್ಯೂ ಮಾಡಿ ಅನುಷ್ಠಾನ ಮಾಡಿ ಎಂದು ಹೇಳಿ ನನ್ನ ಮಾತುಗಳನ್ನು ಹೇಳಿ ಮುಗಿಸುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಉಪ ಸಭಾಧ್ಯಕ್ಷರೆ, ಹಿಂದುಳಿದ ತಾಲ್ಲೂಕುಗಳಾದ ಹೈದ್ರಾಬಾದ್ ಕರ್ನಾಟಕ ಮತ್ತು ಉಳಿದಿರುವ ತಾಲ್ಲೂಕುಗಳಲ್ಲಿ ನಂಜುಂಡಪ್ಪನವರ ವರದಿಯ ಅನುಷ್ಠಾನದ ಬಗ್ಗೆ ಬೆಳಕನ್ನು ಚೆಲ್ಲುವ ಪ್ರಯತ್ನವನ್ನು ಬಹಳ ಆತ್ಮೀಯರು ಈ ಸದನದಲ್ಲಿ ಮಾಡಿದ್ದಾರೆ. ಈ ಅಂಕಿ ಅಂಶಗಳನ್ನು ಈಗಾಗಲೇ ಬಿ.ಆರ್. ಪಾಟೀಲರು, ಶರಣಪ್ರಕಾಶ್, ರಾಯರೆಡ್ಡಿಯವರು, ಈ ಅನುದಾನದ ಹಂಚಿಕೆಯಲ್ಲಾಗಿರುವ ವ್ಯತ್ಯಾಸದ ಬಗ್ಗೆ ಬಹಳಷ್ಟು ವಿಚಾರಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಒಂದು ವಿಚಾರವನ್ನು ಮಾನ್ಯ ಯೋಜನಾ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇಲ್ಲಿಗೆ 5 ತಿಂಗಳು ಮುಗಿಯಿತು, ಉಳಿದಿರುವುದು ಇನ್ನು 7 ತಿಂಗಳು. ಈ 7 ತಿಂಗಳ ಅವಧಿಯಲ್ಲಿ 1,571 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾದ ಅವಶ್ಯಕತೆ ಇದೆ. ತಾವು ರಾಜ್ಯಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿಕೊಳ್ಳುತ್ತೀರೋ ಏನೋ ಗೊತ್ತಿಲ್ಲ. ಸಮಿತಿಯನ್ನು ಮಾಡಿ ಇಲಾಖಾವಾರು ಹಣವನ್ನು ಹಂಚಿಕೆ ಮಾಡಿ, ಜಿಲ್ಲಾಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿ ಸಂಪೂರ್ಣ ಆಡಳಿತಾತ್ಮಕ, ತಾಂತ್ರಿಕ ಅನುಮೋದನೆ ನೀಡುವ ಅಧಿಕಾರ ಜಿಲ್ಲಾ ಮಟ್ಟಕ್ಕೆ ಕೊಟ್ಟು, ಆ ಜಿಲ್ಲಾ ಮಟ್ಟದಲ್ಲಿ ಆ ಪರಿಸರಕ್ಕೆ ಅನುಗುಣವಾಗಿ ಯೋಜನೆ, ಕ್ರಿಯಾ ಯೋಜನೆಗಳನ್ನು ಮಾಡಲು ಅನುವು ಮಾಡಿಕೊಡುವ ವ್ಯವಸ್ಥೆಯನ್ನು ಮಾಡಿದರೆ, ಬಹಳಷ್ಟು ಅತ್ಯುತ್ತಮವಾದ ಕೆಲಸವನ್ನು ಈ ಸರ್ಕಾರ ಮಾಡಿದಂತಾಗುತ್ತದೆ. ಈ ಬಗ್ಗೆ ಚಿಂತನೆ ಮಾಡಿ, ಇವತ್ತು ಸದನದಲ್ಲಿ ಚರ್ಚೆಯಾಗಿರುವ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಉತ್ತರ ಕೊಡುವ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್. ಧ್ರುವನಾರಾಯಣ (ಸಂತೇ ಮಾರೇನಹಳ್ಳಿ): ಮಾನ್ಯ ಅಧ್ಯಕ್ಷರೆ, ಡಾ:ನಂಜುಂಡಪ್ಪ ವರದಿಯನ್ನು ನಿಜವಾಗಿಯೂ ನಾವು ಇವತ್ತು ಸ್ಮರಿಸಿಕೊಳ್ಳಬೇಕು. ಏಕೆಂದರೆ, ಡಾ:ನಂಜುಂಡಪ್ಪನವರು ಬಹಳ ವೈಜ್ಞಾನಿಕವಾದ ವರದಿಯನ್ನು ಕೊಟ್ಟಿದ್ದಾರೆ. ಡಾ:ನಂಜುಂಡಪ್ಪನವರ ವರದಿಯ ಪ್ರಕಾರ ಇಡೀ ದಕ್ಷಿಣ ಕರ್ನಾಟಕದಲ್ಲಿ, ಚಾಮರಾಜನಗರ ಜಿಲ್ಲೆ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದೆ, ಆ ದೃಷ್ಟಿಯಿಂದ ನಾನು ಎರಡು ನಿಮಿಷ ಮಾತನಾಡುತ್ತೇನೆಂದು ಕೇಳಿಕೊಂಡೆ. ಇಡೀ ಭಾರತ ದೇಶದಲ್ಲಿ, ಉಪಗ್ರಹ ಆಧಾರಿತ ಶಿಕ್ಷಣ ಕೊಡುತ್ತಿರುವುದು ಚಾಮರಾಜನಗರ ಜಿಲ್ಲೆ, ತಾಲ್ಲೂಕಿಗೆ ಕೊಡಲಾಗುತ್ತಿದೆ. ಮಾನ್ಯ ಶಿಕ್ಷಣ ಸಚಿವರು ಇಲ್ಲೇ ಇದ್ದಾರೆ, ಎಜ್ಯುಸ್ಯಾಟ್ ಪ್ರೋಗ್ರಾಂ ಅನ್ನು, ಇಡೀ ಭಾರತದಲ್ಲಿ ಇಸ್ರೋನವರು ಪ್ರಪ್ರಥಮವಾಗಿ ಚಾಮರಾಜನಗರ ಜಿಲ್ಲೆ, ತಾಲ್ಲೂಕಿಗೆ ಕೊಡುತ್ತಿದ್ದಾರೆ. ಕಾರಣ, ಕರ್ನಾಟಕ ರಾಜ್ಯದಲ್ಲೇ ಆ ತಾಲ್ಲೂಕು ಬಹಳ ಹಿಂದುಳಿದಿದೆ ಎಂದು ದೇಶದಲ್ಲೇ ಪ್ರಥಮವಾಗಿ ಉಪಗ್ರಹ ಆಧಾರಿತ ಶಿಕ್ಷಣವನ್ನು ಕೊಡುತ್ತಿದ್ದಾರೆ. ತಾವು ಕಾಲೇಜುಗಳ ಹಂಚಿಕೆ ಮಾಡುವಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಕೊಡಲಾಗಿದೆ ಎಂದು ನೋಡಿದ್ದೇವೆ. ಅದೇ ರೀತಿ ನಮಗೆ ಸಹಾಯ ಮಾಡಿದ್ದಾರೆ, ಇಲ್ಲವೆಂದಲ್ಲ. ಅದೂ ನಾವು, ರಾಜ್ಯಪಾಲರವರೆಗೂ ಮೊರೆ ಹೋಗಿ ಪ್ರತಿಭಟಿಸಿ, ಎಲ್ಲಾ ತರಹದ ಹೋರಾಟ ಮಾಡಿದ ಮೇಲೆ ನಮಗೊಂದಷ್ಟು ಕಾಲೇಜನ್ನು ತಾವು ಕೊಟ್ಟಿದ್ದೀರಿ, ತಾವು ಕೊಟ್ಟಿದ್ದಕ್ಕಾಗಿ ನಾನು ಧನ್ಯವಾದಗಳನ್ನು ಕೂಡ ಸಲ್ಲಿಸುತ್ತೇನೆ. ತಮಗೆ ಗೊತ್ತಿರುವಂತೆ ಇಷ್ಟೊಂದು ಹಿಂದುಳಿದ ಚಾಮರಾಜನಗರ ಜಿಲ್ಲೆಗೆ ತಾವು ಹೆಚ್ಚಿನ ಕಾಲೇಜನ್ನು ಕೊಡಬೇಕಾಗಿತ್ತೆಂದು ನನ್ನ ಮನವಿ. ಪುನಃ ಕಾಲೇಜುಗಳನ್ನು ಕೊಡುವುದನ್ನು ಮಾಡುತ್ತಿದ್ದೀರಿ, ನಮ್ಮ ಜಿಲ್ಲೆಗೆ ದಯಮಾಡಿ ಹೆಚ್ಚಿನ ಕಾಲೇಜುಗಳನ್ನು ತಾವು ಕೊಡಬೇಕು. ಜೊತೆಗೆ ಬಯಲು ಸೀಮೆ ಅಭಿವೃದ್ಧಿ ಮಂಡಳಿ ಇದೆ, ಅದಕ್ಕೆ ಕೇವಲ 7 ಲಕ್ಷ ರೂಪಾಯಿಗಳನ್ನು ಮಾತ್ರ ನಗದಿಪಡಿಸಲಾಗಿದೆ. ಬಯಲು ಸೀಮೆ ಎಂದರೆ, ಮಳೆ ಆಧಾರಿತ ಕೃಷಿ ಪ್ರದೇಶ, ಆದುದರಿಂದ ಬಯಲು ಸೀಮೆಗೆ ಹೆಚ್ಚಿನ ಹಣವನ್ನು ಒದಗಿಸುವ ಕೆಲಸವನ್ನು ತಾವು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಮ್ಮ ಜಿಲ್ಲೆ ಅತ್ಯಂತ ಹಿಂದುಳಿದಿದ್ದರೂ ಕೂಡ, ಉದ್ಯೋಗ ಖಾತ್ರಿ ಯೋಜನೆಯಿಲ್ಲ ಮತ್ತು ಸುಜಲ ಕಾರ್ಯಕ್ರಮವಿಲ್ಲ.

ಆದುದರಿಂದ, ದಯಮಾಡಿ ರಾಜ್ಯ ಸರ್ಕಾರದವರು ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕು. ನಮ್ಮ ಜಿಲ್ಲೆಗೆ ಮತ್ತು ನಮ್ಮ ಭಾಗಕ್ಕೆ ಹೆಚ್ಚಿನ ಅನುದಾನವನ್ನು ತಾವು ನಂಜುಂಡಪ್ಪ ವರದಿ ಆಧಾರದ ಮೇಲೆ ಒದಗಿಸಬೇಕೆಂದು ಒತ್ತಾಯ ಮಾಡಿ ನನಗೆ ಸಮಯ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎ.ವಿ.ಉಮಾಪತಿ (ಹೊಳಲ್ಕೆರೆ): ಮಾನ್ಯ ಉಪಾಧ್ಯಕ್ಷರೆ, ನಂಜುಂಡಪ್ಪ ವರದಿ ಬಗ್ಗೆ ಸಾಕಷ್ಟು ಜನ ನಮ್ಮ ಮಾನ್ಯ ಸದಸ್ಯರುಗಳು ಬೆಳಕನ್ನು ಚೆಲ್ಲಿದ್ದಾರೆ. ಡಾ: ನಂಜುಂಡಪ್ಪನವರು ನಮ್ಮ ತಾಲ್ಲೂಕಿನವರು. ಅವರು ನಮ್ಮ ಹೊಳಲ್ಕೆರೆ ತಾಲ್ಲೂಕಿನಲ್ಲಿ ಹುಟ್ಟಿ ಇಷ್ಟು ಎತ್ತರಕ್ಕೆ ಬೆಳೆದು ವೈಜ್ಞಾನಿಕವಾದ ವರದಿಯನ್ನು ಕೊಟ್ಟಿದ್ದಾರೆ. ಅವರು ಅದೇ ತಾಲ್ಲೂಕಿನವರಾದರೂ ಕೂಡ ಕೊಳಲ್ಕೆರೆ ತಾಲ್ಲೂಕನ್ನು ಅತೀ ಹಿಂದುಳಿದ ತಾಲ್ಲೂಕು ಎಂದು ಸೇರಿಸಿದ್ದಾರೆ. ಆದರೆ ಅದಕ್ಕೆ ಕೊಟ್ಟಿರತಕ್ಕಂತಹ ಅನುದಾನವಾಗಲಿ, ಶಿಕ್ಷಣ ಕ್ಷೇತ್ರದಲ್ಲಿ ಶಾಲಾ ಕಾಲೇಜುಗಳನ್ನು ಕೊಡತಕ್ಕಂತಹ ಸಂದರ್ಭದಲ್ಲಿ ಮಾನ್ಯ ಹೊರಟ್ಟಿ ಸಾಹೇಬರು ಇದ್ದಾರೆ. ಅವರು ಪಟ್ಟಿಯನ್ನು ಮಾಡಿ ಕಳುಹಿಸತಕ್ಕಂತಹ ಸಂದರ್ಭದಲ್ಲಿ ನಾವು ನೋಡುತ್ತಿರುತ್ತೇವೆ, ಪಟ್ಟಿ ಕಳುಹಿಸುವ ಸಂದರ್ಭದಲ್ಲಿ ಕಛೇರಿ ಬಿಡುವ ಸಂದರ್ಭದಲ್ಲಿ ಲಿಸ್ಟ್‌ನಲ್ಲಿ ಹೆಸರು ಇರುತ್ತದೆ, ಹೊರಗಡೆ ಹೋದ ಮೇಲೆ ಏನಾಗುತ್ತದೆ ಗೊತ್ತಿಲ್ಲ. ಪ್ರತಿ ಸಾರಿ ನಮ್ಮ ತಾಲ್ಲೂಕಿಗೆ ನಂಜುಂಡಪ್ಪನವರ ವರದಿ ಪ್ರಕಾರ ಹೊಳಲ್ಕೆರೆ ತಾಲ್ಲೂಕು ಅತಿ ಹಿಂದುಳಿದ ತಾಲ್ಲೂಕು ಎಂದು ಪಟ್ಟಿಯಲ್ಲಿ ಸೇರಿಸಿದ್ದರೂ ಕೂಡ, ಒಂದು ಕಾಲೇಜನ್ನೂ ಕೊಡಲಿಲ್ಲ, ಒಂದು ಹೈಸ್ಕೂಲನ್ನೂ ಕೊಡಲಿಲ್ಲ, ಆದರೆ ಎರಡನೇ ಪಟ್ಟಿಯಲ್ಲಿ ನಮ್ಮ ಮಾನ್ಯ ಶಿಕ್ಷಣ ಸಚಿವರು ಮಾನ್ಯ ಹೊರಟ್ಟಿಯವರು ಒಂದು ಶಾಲೆಯನ್ನು ಕೊಟ್ಟಿದ್ದಾರೆ. ಆದರೆ ನಮಗೆ ಒಂದು ಪದವಿ ಪೂರ್ವ ಕಾಲೇಜುಬೇಕೆಂದು ಕೇಳಿದ್ದೆವು, ಅದನ್ನು ಕೂಡ ಅವರಿಗೆ ಕೊಡುವುದಕ್ಕಾಗಲಿಲ್ಲ. ಆದರೆ ನಮ್ಮ ಉನ್ನತ ಶಿಕ್ಷಣ ಸಚಿವರು ಮಾತ್ರ ಒಂದು ಕಾಲೇಜನ್ನು ಕೊಟ್ಟಿದ್ದಾರೆ. ನಮ್ಮ ಚಿತ್ರದುರ್ಗ ಜಿಲ್ಲೆ ಬಗ್ಗೆ ತಮಗೆ ಗೊತ್ತಿದೆ. ತಾವೂ ಕೂಡ ಅದೇ ಜಿಲ್ಲೆಯಿಂದ ಬಂದಂತಹವರು. ಇಡೀ ಚಿತ್ರದುರ್ಗ ಜಿಲ್ಲೆ ಬಯಲು ಪ್ರದೇಶ ಮತ್ತು ಹಿಂದುಳಿದಿರತಕ್ಕಂತಹ

ಪ್ರದೇಶ. ಹಿರಿಯರು ಒಂದು ಗಾದೆ ಹೇಳುತ್ತಾರೆ, 'ಇಲ್ಲ ಕೆರೆ ಇರಬೇಕು, ಇಲ್ಲ ಎರೆ ಇರಬೇಕು ಎಂದು ಹೇಳುತ್ತಾರೆ'. ನಮ್ಮ ಜಿಲ್ಲೆಗೆ ಎರೆ ಜಮೀನೂ ಇಲ್ಲ. ಅಂತಹ ಬಯಲು ಪ್ರದೇಶ ಇರತಕ್ಕಂತಹ ಈ ಜಿಲ್ಲೆಗೆ ನಮ್ಮ ಮಾನ್ಯ ಯೋಜನಾ ಸಚಿವರು ಬಯಲು ಸೀಮೆ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಪ್ರಯತ್ನ ಮಾಡಿ ನಮಗೆ ಸ್ವಲ್ಪ ಹಣವನ್ನು ಒದಗಿಸಿದ್ದಾರೆ. ಇನ್ನೂ ಹೆಚ್ಚಿನ ಹಣವನ್ನು ಅವರು ಒದಗಿಸಲಿಕ್ಕೆ ಅವರು ಪ್ರಯತ್ನ ಮಾಡಬೇಕು. ನಾನು ನಮ್ಮ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನಾವೇನು ಇವತ್ತು ತಮಗೆ ಬೇಡಿಕೆಯನ್ನು ಇಟ್ಟಿದ್ದೇವೆ, ಒಂದು ಪದವಿ ಪೂರ್ವ ಕಾಲೇಜು ಕೊಡತಕ್ಕಂಥಾದ್ದು, ಪ್ರೌಢಶಾಲೆಗಳನ್ನು ಕೊಡತಕ್ಕಂತಹ ಪ್ರಯತ್ನ ಮಾಡಬೇಕೆಂದು ಹೇಳಿ, ತಮ್ಮ ಮೂಲಕ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ: ವೀರಬಸವಂತರೆಡ್ಡಿ ಮುದ್ನಾಳ್: ಮಾನ್ಯ ಉಪಾಧ್ಯಕ್ಷರೆ, 2000ದಲ್ಲಿ ತಾವು ಹೇಳಿದ್ದು 16,000 ಕೋಟಿ ರೂ. Inflation ಲೆಕ್ಕ ಹಿಡಿದರೆ 20,000 ಕೋಟಿ ರೂ.ಗಿಂತ ಮೇಲಾಗುತ್ತದೆ. It becomes more than 20,000 crores now, if you take inflation. ದಯಮಾಡಿ ಎಲ್ಲಾ ಶಾಸಕರಿಗೆ ತಾವು ಒಂದು ಸಾರಿ ಕರೆದು ಇದರ ಬಗ್ಗೆ ಮೀಟಿಂಗ್ ಮಾಡಬೇಕೆಂದು ನನ್ನ ಸಲಹೆ.

ಶ್ರೀ ಟಿ. ಭಾಗೀರಥಿ ಮರುಳ ಸಿದ್ದನಗೌಡ (ಕೊಟ್ಟೂರು): ಮಾನ್ಯ ಉಪಾಧ್ಯಕ್ಷರೆ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಿನ್ನೆ ಇದರ ಬಗ್ಗೆ ನಾನು ಪ್ರಶ್ನೆ ಹಾಕಿಕೊಳ್ಳಬೇಕಾಗಿದೆ. 20 ಅಂಶಗಳ ಕಾರ್ಯಕ್ರಮಗಳನ್ನು ಏನು ಮಾಡುತ್ತೀವಿ, ಅದರಲ್ಲಿ ಎಲ್ಲಾ ಇಲಾಖೆಗಳ ಎಲ್ಲಾ ಯೋಜನೆಗಳನ್ನು ಈ ತಾಲ್ಲೂಕುಗಳಿಗೆ ಪ್ರಥಮ ಆದ್ಯತೆ ಕೊಟ್ಟು, ಅದರಲ್ಲಿಯೂ ವಿಶೇಷವಾಗಿ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ಕೊಟ್ಟು, ಆ ಭಾಗದ ಜನರನ್ನು ಮುಂದಕ್ಕೆ ತರಲುಕ್ಕೆ ಸಾಧ್ಯತೆ ಮಾಡತಕ್ಕಂತಹ ಒಂದು ಕಾರ್ಯಕ್ರಮವೆಂದು ನಾನು ಅಂದುಕೊಂಡಿದ್ದೇನೆ. ಇವರು ಪ್ರಾರಂಭದಲ್ಲಿಯೇ ನಾವು ನಂಜುಂಡಪ್ಪ ವರದಿಯನ್ನು ಜಾರಿಗೆ ತಂದಿದ್ದೇವೆ, ಇಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಇವರು ಬಜೆಟ್ ಮಂಡನೆ ಮಾಡತಕ್ಕಂತಹ ಸಂದರ್ಭದಲ್ಲಿ ಹೇಳಿರುವುದನ್ನು ಪ್ರಥಮ ಹೆಜ್ಜೆಯಲ್ಲಿಯೇ ಇವರು

ಎಡವಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ನಮ್ಮ ಹಿಂದುಳಿದ ತಾಲ್ಲೂಕುಗಳಿಗೆ ವಿಶೇಷವಾಗಿ ನಾನು ಶಿಕ್ಷಣದ ಬಗ್ಗೆ ಹೇಳುತ್ತಿದ್ದೇನೆ, ಯಾವುದೇ ಹೈಸ್ಕೂಲ್‌ಗಳೂ, ಹಾಸ್ಟೆಲ್‌ಗಳು, ಕಾಲೇಜುಗಳನ್ನೂ ಯಾವುದನ್ನೂ ಕೊಟ್ಟಿಲ್ಲ. ಯಾವುದೇ ಒಂದು ವಿಚಾರದಲ್ಲಿ ಈ ಹಿಂದುಳಿದ ತಾಲ್ಲೂಕುಗಳಿಗೆ ಇಲ್ಲ. ನಾನು ಶಿಕ್ಷಣಕ್ಕೆ ಪ್ರಥಮ ಆದ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಉದಾಹರಣೆಗೆ ನನ್ನ ಕ್ಷೇತ್ರ ಅತ್ಯಂತ ಹಿಂದುಳಿದ ತಾಲ್ಲೂಕು ಆಗಿದೆ. ಹೀಗಾಗಿ ನಾನು ನಿನ್ನೆ ಪ್ರಶ್ನೆಯನ್ನು ಕೇಳಿದಂತಹ ಸಂದರ್ಭದಲ್ಲಿ ಪ್ರತಿಯೊಂದು ಇಲಾಖೆಗೆ ಒಂದೊಂದು ಇಲಾಖೆಗೆ ಇಷ್ಟಿಷ್ಟು ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಂಡಿದ್ದೇನೆ. ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರುವಲ್ಲಿ ತಾವು ಬಹಳ ಹೆಚ್ಚಿನ ಶ್ರಮ ವಹಿಸಿ, ಏನು ಸಲಹೆಗಳನ್ನು ಕೊಟ್ಟಿದ್ದೀವಿ, ಆ ಸಲಹೆಗಳನ್ನು ಸ್ವೀಕಾರ ಮಾಡಿ, ಶಾಸಕರನ್ನು ಗಣನೆಗೆ ತೆಗೆದುಕೊಂಡು ಈ ಕಾರ್ಯಕ್ರಮ ಮಾಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ರಾಮಚಂದ್ರೇ ಗೌಡ (ಯೋಜನೆ, ಅಂಕಿಸಂಖ್ಯೆ, ಸಣ್ಣ ಉಳಿತಾಯ, ಲಾಟರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಅತ್ಯಂತ ಪ್ರಮುಖವಾದ ವಿಚಾರ ಹೈದ್ರಾಬಾದ್ ಕರ್ನಾಟಕದಲ್ಲಿ ಅತಿ ಹಿಂದುಳಿದಂತಹ ಪ್ರದೇಶ ಈ ಪ್ರದೇಶದ ಬಗ್ಗೆ ಯಾವುದೇ ಕಾಳಜಿಯನ್ನು......

ಶ್ರೀ ಸಿ.ಎಸ್.ನಾಡಗೌಡರ್ (ಅಪ್ಪಾಜಿ): ಮಾನ್ಯ ಉಪಾಧ್ಯಕ್ಷರೆ, ಒಂದು correction ಬರೀ ಹೈದರಾಬಾದ್ ಕರ್ನಾಟಕ ಎಂದು ಹೇಳಬೇಡಿ, ಬಾಂಬೆ ಕರ್ನಾಟಕವೂ ಇದರಲ್ಲಿ ಸೇರುತ್ತದೆ. ಹಿಂದುಳಿದ ಪ್ರದೇಶ ಎಂದು ಹೇಳಿ, ಹೈದ್ರಾಬಾದ್ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಬಾರದು.

ಉಪಾಧ್ಯಕ್ಷರು: ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಎಂದು ಹೇಳಿದರು.

ಶ್ರೀ ರಾಮಚಂದ್ರೇಗೌಡ: ಮಾನ್ಯ ಉಪಾಧ್ಯಕ್ಷರೆ, ಸಮಸ್ಯೆ ಎಲ್ಲಿಂದ ಪ್ರಾರಂಭವಾಯಿತು ಎಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಉಪಾಧ್ಯಕ್ಷರೆ, ಪ್ರಾದೇಶಿಕ ಅಭಿವೃದ್ಧಿ ಮಂಡಳಿ, regional imbalance ಗೆ ಮೊದಲು ಹೇಳಿದ ತರಹ ಆಯಿತು. ಆದಾದ ಮೇಲೆ ಮಾನ್ಯ ಎಸ್.ಎಂ.ಕೃಷ್ಣರವರು ಬಂದ ಮೇಲೆ ಉತ್ತರ ಕರ್ನಾಟಕ ಎಂದರೆ, ಬೀದರ್‌ನಿಂದ ಬೆಳಗಾಂವರೆಗೆ, ಬಿಜಾಪುರ ಮತ್ತು ಎಲ್ಲಾ district ಗಳೂ ಸೇರಿವೆ. ನಾನು ಹೇಳತಕ್ಕಂಥಾದ್ದು ಇಷ್ಟೆ, ಬಹಳ ಗುರುತರವಾದ ಸಮಸ್ಯೆಗಳ ಬಗ್ಗೆ ನಾವು ಇವತ್ತಿನ ದಿವಸ ಹೇಳಿದ್ದೇವೆ. ಇವತ್ತು ಪದೇ ಪದೇ ಮಾನ್ಯ ಉಪಮುಖ್ಯಮಂತ್ರಿಗಳು 1,571 ಕೋಟಿ ರೂ, ಕೊಡುತ್ತೇವೆಂದು ಹೇಳಿದ್ದಾರೆ. ಎಲ್ಲಿ ಹಣ ಕೊಟ್ಟಿದ್ದಾರೆ? ಯಾವ ಯಾವ ಕೆಲಸ ಕಾರ್ಯಗಳು ಆಗಿವೆ? ಅದು ಬೇಕಾಗಿದೆ. ತಾವು Planning Minister ಇದ್ದೀರಿ, ಹಿರಿಯರಿದ್ದೀರಿ, weightage ಕೊಡತಕ್ಕಂಥದ್ದು ನೀವು ಮಾಡಿದ್ದೀರಿ. ಅದಕ್ಕೆ ನಾವು ಒಪ್ಪುತ್ತೇವೆ. ಮಾನ್ಯ ಉಪಮುಖ್ಯಮಂತ್ರಿಗಳು ಬರಬೇಕು. ಇವತ್ತು ಎಷ್ಟು ಹಣ ಬಿಡುಗಡೆ ಮಾಡಿದ್ದೇವೆಂಬ ತಾರತಮ್ಯದಲ್ಲಿ ನಮ್ಮ ಭಾಗದ ಜನರಿಗೆ ಅವರು ಬಂದು ಹೇಳಬೇಕು. ಅವರ ಬಾಯಿಯಲ್ಲಿ ನಿಮ್ಮ ವಿಷಯ ಹೇಳಬೇಕು. ನಮಗೇನೂ ಗೊತ್ತಿಲ್ಲವಾ? ನೀವು ಕೂಡ 30 ವರ್ಷಗಳಿಂದ ಸದನದಲ್ಲಿ ಕೆಲಸ ಮಾಡಿದ್ದೀರಿ, ಎಷ್ಟೋ ಸಲ ನಮಗೆ ನೀವು ಕೈ ಹಿಡಿದಿದ್ದೀರಿ, ಅದಕ್ಕಾಗಿ ಮಾನ್ಯ ಉಪಮುಖ್ಯಮಂತ್ರಿಗಳು ಬಂದು ಇಂತಹ ಒಂದು ಗಂಭೀರವಾದ ಪ್ರಶ್ನೆ ಎತ್ತಿದ ಮೇಲೆ ನಿರ್ಲಕ್ಷ್ಯ ಆಗಬಾರದು. ಮಾನ್ಯ ಹೊರಟ್ಟಿಯವರೇ ನಿಮಗೆ ಹೇಳುತ್ತೇನೆ, ನಿಮ್ಮ ಬಿಲ್ ಇರುವುದರಿಂದ ನೀವು ಕುಳಿತಿದ್ದೀರಿ. ಇಲ್ಲದಿದ್ದರೆ, ನೀವೂ ಇರುತ್ತಿರಲಿಲ್ಲ. ಎಷ್ಟು ಜನ ಮಂತ್ರಿಗಳಿದ್ದಾರೆ? ಯಾರೂ ಇಲ್ಲ.

ಶ್ರೀ ಬಿ.ಎಸ್.ಹೊರಟ್ಟಿ: ನಾನು ಪ್ರತಿದಿನ ಇಲ್ಲಿಯೇ ಇರುತ್ತೇನೆ.

ಶ್ರೀ ಬಸವರಾಜರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ತಾವು ಉತ್ತರ ಕೊಡಿ. ಉತ್ತರ ಕೊಡುವುದರ ಬಗ್ಗೆ ನಮ್ಮ ಅಭ್ಯಂತರವೇನಿಲ್ಲ. ಆದರೆ ಬಹಳ ಮುಖ್ಯವಾಗಿ ಹಣಕಾಸಿನ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಹಣಕಾಸಿಗೆ ಸಂಬಂಧಪಟ್ಟ ವಿಚಾರ ಇರುವುದರಿಂದ ಅವರು ಉತ್ತರ ಕೊಡದಿದ್ದರೆ ಪ್ರಯೋಜನವಿಲ್ಲ. ಮತ್ತೆ ಇಲ್ಲಿ ಅಸಮಾನತೆ ಪ್ರಾರಂಭವಾಗುತ್ತದೆ. ಮತ್ತೆ ಶೋಷಣೆ ಪ್ರಾರಂಭವಾಗುತ್ತದೆ.

ಉಪಾಧ್ಯಕ್ಷರು: ಅವರು ಏನು ಹೇಳುತ್ತಾರೆ ಕೇಳೋಣ. ಅವರು ಏನು ಹೇಳುತ್ತಾರೆಂದು ಕೇಳಲೇ ಇಲ್ಲವಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: Finance Minister ಗೆ ಕರೆಸಿ ಉತ್ತರ ಕೊಡಲಿ.

ಶ್ರೀ ರಾಮಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೆ, ರಾಜ್ಯದ ಅತ್ಯಂತ ಗಂಭೀರವಾದ ಸಮಸ್ಯೆ ಬಗ್ಗೆ ಈ ಗೌರವಾನ್ವಿತ ಸಭೆಯ ಅನೇಕ ಹಿರಿಯ ಸದಸ್ಯರಿಂದ ಹಿಡಿದು ಸುಮಾರು 12 ಜನ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ವಿಶೇಷವಾಗಿ ಪ್ರತಿಪಕ್ಷದ ನಾಯಕರಾದ ಸನ್ಮಾನ್ಯ ಧರ್ಮಸಿಂಗ್‌ರವರು, ಸನ್ಮಾನ್ಯ ಬಿ.ಆರ್.ಪಾಟೀಲ್‌ರವರು, ವೈಜನಾಥ್ ಪಾಟೀಲ್‌ರವರು, ಸನ್ಮಾನ್ಯ ಶ್ರೀ ಬಸವರಾಜ ರಾಯರೆಡ್ಡಿಯವರು, ಸನ್ಮಾನ್ಯ ಶ್ರೀ ಬೋಸರಾಜುರವರು, ಸನ್ಮಾನ್ಯ ನಾಡಗೌಡರು, ಸನ್ಮಾನ್ಯ ಶರಣಪ್ರಕಾಶ್ ಪಾಟೀಲ್‌ರವರು, ಮಾನ್ಯ ಹಂಪನಗೌಡರು, ಮಾನ್ಯ ಧೃವನಾರಾಯಣಗೌಡರು, ಮಾನ್ಯ ಉಮಾಪತಿಯವರು, ಡಾ:ಬಸಂತರೆಡ್ಡಿಯವರು, ಶ್ರೀಮತಿ ಭಾಗೀರತಿ ಮರುಳಸಿದ್ದನಗೌಡರು, ಅವಕಾಶ ಇದ್ದರೆ ಇನ್ನೂ ಬಹಳಷ್ಟು ಜನ ಮಾತನಾಡುವವರಿದ್ದಾರೆ, ಇದು ಮಾತನಾಡಬೇಕಾದ ವಿಚಾರ. ನಿಯಮ 69 ರಲ್ಲಿ ಇವರುಗಳು ಮಾತನಾಡಿದ್ದಾರೆ. ಈ ರಾಜ್ಯದಲ್ಲಿ ಅಸಮಾನತೆ ಇದೆ, ಅದನ್ನು ಸರಿಯಾಗಿ ಗುರುತು ಹಚ್ಚಬೇಕೆಂದು ಹೇಳಿ ಹಿಂದೆ ಇದ್ದಂತಹ ಸರ್ಕಾರ ನಂಜುಂಡಪ್ಪನವರನ್ನು ನೇಮಕ ಮಾಡಿ, ಒಂದು ವರದಿಯನ್ನು ಸಲ್ಲಿಸಬೇಕೆಂದು ಹೇಳಿದರು. ನಂಜುಂಡಪ್ಪನವರು 2000ನೇ ಇಸವಿಯಲ್ಲಿ ಒಂದು ವರದಿಯನ್ನು ಒಪ್ಪಿಸಿದರು. ಆ ವರದಿಯನ್ನು ಒಪ್ಪಿಸಿದ ಮೇಲೆ ಸನ್ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಈ ಬಗ್ಗೆ ಉಪ ಸಮಿತಿ ಒಂದೇ ಒಂದು ಬಾರೀ ಸಭೆ ಸೇರಿದೆ. ಆದಾದ ಮೇಲೆ ಯಾವುದೇ ಸಭೆ ನಡೆದಿಲ್ಲ. ನಮ್ಮ ಈಗಿನ ಸಮ್ಮಿಶ್ರ ಸರ್ಕಾರದಲ್ಲಿ ಉಪ ಸಮಿತಿ ಸಭೆ ಸೇರಿ ಇದಕ್ಕೇನಾದರೂ ಒಂದು ಕಾಯಕಲ್ಪ ಕೊಡಬೇಕು, ಈ ರಾಜ್ಯದಲ್ಲಿರತಕ್ಕಂಥ ಅಸಮಾನತೆಯನ್ನು ಸರಿಮಾಡಬೇಕು, ಈ ಅಸಮಾನತೆ ಎಂಬುದು ಕೇವಲ ಉತ್ತರ ಕರ್ನಾಟಕದಲ್ಲಷ್ಟೇ ಅಲ್ಲ, ಹಳೇ ಮೈಸೂರಿನ ಮೈಸೂರು ಭಾಗಗಳಲ್ಲಿಯೂ, ಬೆಂಗಳೂರಿನ ಭಾಗಗಳಲ್ಲಿಯೂ ಇದೆ ಎನ್ನುವಂಥ ಎಲ್ಲಾ ಅಂಶಗಳನ್ನು ಗುರುತಿಸಿ ಸುಮಾರು 114 ತಾಲ್ಲೂಕುಗಳನ್ನು

ಸನ್ಮಾನ್ಯ ನಂಜುಂಡಪ್ಪನವರು ಗುರುತಿಸಿದರು. ಈ 114 ತಾಲ್ಲೂಕುಗಳನ್ನು ಮೂರು ಭಾಗಗಳನ್ನಾಗಿ ಮಾಡಿ ಅದರಲ್ಲಿ 39 ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದವುಗಳೆಂದು, 40 ತಾಲ್ಲೂಕುಗಳನ್ನು ಅತಿ ಹಿಂದುಳಿದವಗಳೆಂದು ಮತ್ತು 35 ತಾಲ್ಲೂಕುಗಳನ್ನು ಹಿಂದುಳಿದವುಗಳೆಂದು ಮೂರು ಭಾಗಗಳಾನ್ನಾಗಿ ಮಾಡಿ ನಂಜುಂಡಪ್ಪನವರ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ಉನ್ನತ ಮಟ್ಟದ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು 8 ವರ್ಷಗಳಲ್ಲಿ ಜಾರಿಗೆ ತಂದು ಇದನ್ನು ಸರಿದೂಗಿಸಬೇಕೆನ್ನುವ ಅಭಿಪ್ರಾಯವನ್ನು ಇಟ್ಟರು. ಆ ರೀತಿ ಇಡುವಂಥ ಸಂಧರ್ಭದಲ್ಲಿ 2000ನೇ ಇಸವಿಯಲ್ಲಿ ವರದಿಯನ್ನು ಕೊಟ್ಟಾಗ ಸುಮಾರು 32 ಸಾವಿರದ 75 ಕೋಟಿ ರೂಪಾಯಿಗಳನ್ನು ಒದಗಿಸಬೇಕು ಎನ್ನುವ ಅಂಶವನ್ನೂ ಕೂಡ ವರದಿಯಲ್ಲಿ ಹೇಳಿದ್ದಾರೆ. ಅವರೇನು 7 ವರ್ಷದ ಕೆಳಗೆ 32 ಸಾವಿರ ಕೋಟಿ ರೂಪಾಯಿಗಳನ್ನು ಇಡಬೇಕು ಎಂದು ಹೇಳಿದ್ದರೋ ಅದನ್ನು ಈ ದಿನಗಳಲ್ಲಿ ಲೆಕ್ಕ ಹಾಕಿದರೆ ಬಹುಶಃ 32 ಸಾವಿರ ಕೋಟಿ ರೂಪಾಯಿ ಈಗ ಸಾಕಾಗುವುದಿಲ್ಲ. ನಾವು ಪುನಃ ಮರುಚಿಂತನೆ ಮಾಡಬೇಕಾಗುತ್ತದೆ. ಈ ಸಭೆಯಲ್ಲಿ ಮಾತನಾಡಿದಂಥ ಎಲ್ಲ ಮಹನೀಯರುಗಳಿಗೂ ಕೂಡ ಇದರ ಬಗ್ಗೆ ದೀರ್ಘವಾಗಿ ಮಾತನಾಡಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ:- ರಾಮಚಂದ್ರೇಗೌಡರೆ, ಅವರು ವರದಿ ಕೊಟ್ಟಿದ್ದು 2002 ರ ಜೂನ್‌ನಲ್ಲಿ. 2000ನೇ ಇಸವಿಯಲ್ಲಿ ಅಲ್ಲ. ಅದರಲ್ಲಿಯೇ ಇದೆ ನೋಡಿ.

ಶ್ರೀ ರಾಮಚಂದ್ರೇಗೌಡ: 2002 ಜೂನ್, subject to correction. ಆ 32 ಸಾವಿರದ 75 ಕೋಟಿ ರೂಪಾಯಿಗಳನ್ನು ಒದಗಿಸಬೇಕಾದರೆ ಬಹುಶಃ, ಈಗ ಇಲ್ಲಿ ಒಂದನ್ನು ಉದಾಹರಣೆಗೆ ಹೇಳುತ್ತೇನೆ, ಹದಿನೈದು ಇಪ್ಪತ್ತು ದಿವಸಗಳಿಂದ ಉಪವಾಸ ಇದ್ದು ಜ್ಞಾನ ಇಲ್ಲದೇ ಮಲಗಿರುವವರನ್ನು ಎಬ್ಬಿಸಿ ಒಂದು ಲೋಟ ನೀರೋ, ಜ್ಯೂಸೋ ಕೊಟ್ಟರೆ ಎಚ್ಚರಿಕೆ ಆದ ಮೇಲೆ ನನಗೆ ತಿಂಡಿ ಬೇಕು ಎಂದು ಕೇಳುತ್ತಾರೆ. ಇಲ್ಲದೇ ಇದ್ದರೆ ಮಲಗಿಯೇ ಇರುತ್ತಾರೆ. ಏನನ್ನೂ ಕೇಳುವುದಿಲ್ಲ. 2002 ರಲ್ಲಿ ಇಟ್ಟಂತಹ ವರದಿ ಏನತ್ತು ಅದರ ಬಗ್ಗೆ 5 ವರ್ಷಗಳ ಕಾಲ ಯಾರೂ ಮಾತಾಡಿಸಿರಲಿಲ್ಲ. ಈಗ ನಾವೇನೂ ಸ್ವಲ್ಪ ಕೊಡುತ್ತೇವೆ ಎಂದು ಹೇಳಿದ ಮೇಲೆ......

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :– ಈ ತರಹ ನೀವು ಉತ್ತರ ಹೇಳಿಕೊಂಡು ಶಂಕರಮಠದಲ್ಲಿ ಪ್ರವಚನ ಹೇಳಿದ ಹಾಗೆ ಹೇಳಬೇಡಿ. ಇಲ್ಲಿ ಕರೆಕ್ಟಾಗಿ ಹೇಳಿ. ನಾವೇನು ಕೇಳುತ್ತಿದ್ದೇವೆಂದರೆ, ರಿಪೋರ್ಟ್ ಆಗಿದೆ, ಅದನ್ನು ಅನುಷ್ಠಾನಕ್ಕೆ ತರಬೇಕು. ಅದಕ್ಕಾಗಿ ದುಡ್ಡನ್ನು ಬಿಡುಗಡೆ ಮಾಡಬೇಕು ಎಂದು ಹೇಳುತ್ತಿದ್ದೇವೆ.

ಶ್ರೀ ರಾಮಚಂದ್ರೇಗೌಡ:– ಬೇಡಿಕೆ ಯಾವಾಗ ಬರುತ್ತದೆಂದರೆ...

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:– ಇವೆಲ್ಲಾ ಬಜೆಟ್ ಮೇಲೆ ಮಾತನಾಡುವಾಗ ಚರ್ಚೆಯಾಗಿದೆ. ಈಗ ನೇರ ವಿಷಯಕ್ಕೆ ತಾವು ಬನ್ನಿ.

ಶ್ರೀ. ರಾಮಚಂದ್ರೇಗೌಡ:– ಉತ್ತರವನ್ನು ಕೊಡುತ್ತಿದ್ದೆನಲ್ಲ.

ಶ್ರೀ ಸಿ.ಎಸ್. ನಾಡಗೌಡರ್ (ಅಪ್ಪಾಜಿ):– ರಾಮಚಂದ್ರೇಗೌಡರೆ, ಈಶಾನ್ಯ ವಲಯ ಯಾವಾಗ ಸ್ಥಾಪನೆಯಾಯಿತು? ತಾವು ದಯವಿಟ್ಟು ಹೇಳಿ. ಆಮೇಲೆ ಕೆ.ಬಿ.ಜೆ.ಎನ್.ಎಲ್.ಗೆ ಒಂಬೈನೂರು ಚಿಲ್ಲರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು ಯಾವಾಗ? ನೀರಾವರಿಗೆ ಹೆಚ್ಚು ಒತ್ತು ಕೊಟ್ಟಿದ್ದು ಯಾವಾಗ? ಈ ರೀತಿಯಲ್ಲಿ ನೀವು ಉತ್ತರ ಕೊಡುತ್ತಿರುವುದು ಸರಿಯಲ್ಲ.

ಶ್ರೀ ರಾಮಚಂದ್ರೇಗೌಡ:– ಏಕೆ ಕೊಡಬಾರದು? ಕೊಡಲೇಬೇಕಾಗುತ್ತದೆ. ಕಳೆದ 5 ವರ್ಷದಿಂದ ನಂಜುಂಡಪ್ಪ ವರದಿ ಬಗ್ಗೆ ಕೇವಲ ಹೇಳುತ್ತಲೇ ಇದ್ದರೆ ವಿನಃ ಯಾರೂ ಅದನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡದೇ ಇರುವಾಗ ನಾವು ಈಗ ಪ್ರಯತ್ನ ಮಾಡಿದ್ದೇವಲ್ಲ?

ಶ್ರೀ ಬಸವರಾಜ ರಾಯರೆಡ್ಡಿ:– ರಾಮಚಂದ್ರೇಗೌಡರೆ, ಉತ್ತರ ಹೇಳಿ. ಶಂಕರಮಠದ ಕೀರ್ತನೆ ಬೇಡ.

ಶ್ರೀ ರಾಮಚಂದ್ರೇಗೌಡ:– ಶಂಕರಮಠದ ಕೀರ್ತನೆಯೂ ಬೇಕಾಗಿಲ್ಲ, ಕಾರ್ಲ್‌ಮಾರ್ಕ್ಸ್ ಕೀರ್ತನೆಯೂ ಇಲ್ಲೇನೂ ಬೇಕಾಗಿಲ್ಲ.

ಶ್ರೀ ಧರ್ಮಸಿಂಗ್:– ಇಲ್ಲಿ ನೋಡಿ. ಎಸ್.ಎಂ.ಕೃಷ್ಣ ಕಾಲದಲ್ಲಿ ವರದಿ ಬಂತು. ವರದಿ ಬಂದ ಮೇಲೆ, he has implemented.

ಶ್ರೀ ರಾಮಚಂದ್ರೇಗೌಡ:- ವ್ಯವಸ್ಥಿತವಾದಂಥ ಪ್ಲಾನಿಂಗ್ ಮಾಡಲಿಲ್ಲ. ನೀವು ಯೂನಿವರ್ಸಿಟಿ ಕೊಟ್ಟಿರಬಹುದು, ನೀವು ನೀರಾವರಿ ತಂದಿರಬಹುದು, ವ್ಯವಸ್ಥಿತವಾದಂಥ ಪ್ಲಾನಿಂಗ್ ಅನ್ನು ಇದುವರೆಗೂ ಯಾರೂ ಮಾಡಿರಲಿಲ್ಲ. This government is doing it for first time. We are doing it.

ಶ್ರೀ ಧರ್ಮಸಿಂಗ್:- ಈ ವರದಿ ಬಂದ ಮೇಲೆ ಬಿಜ್ಞಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ, ಬೀದರ್‌ನಲ್ಲಿ ಪಶು ವಿಶ್ವವಿದ್ಯಾನಿಲಯ ಯಾರು ಮಾಡಿದ್ದು? ನೀವು ಮಾಡಿದಿರೇನು? ನಿಮ್ಮ ಯಡಿಯೂರಪ್ಪನವರನ್ನು ಕರೆಸಿ. ಕೇಳುತ್ತೇವೆ. ಯಡಿಯೂರಪ್ಪನವರು ಹೇಳುತ್ತಾರೆ ಗುಲ್ಬರ್ಗಾದಲ್ಲಿ 32 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು.

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್: ಶಿಕಾರಿಪುರ ಮತ್ತು ಬೇರೆ ಕಡೆ ಎಲ್ಲಾ ರೋಡ್‌ಗಳನ್ನು ನೀವೇ ಮಾಡಿಕೊಂಡಿರಿ. ನಂಜುಂಡಪ್ಪ ವರದಿಗೆ ನೀವೇನು ಮಾಡಿದ್ದೀರಿ? ನಿಮ್ಮದೆಲ್ಲವೂ ಹಾಸನ, ಶಿಕಾರಿಪುರ, ಹರದನಹಳ್ಳಿ, ಹೊಳೆನರಸೀಪುರ, ಈ ಕಡೆಗೇ ನೀವು ಮಾಡಿದ್ದೀರಿ ಹೊರತು ನಂಜುಂಡಪ್ಪ ವರದಿಯಲ್ಲಿರುವಂತೆ ನೀವೇನು ಮಾಡಿದ್ದೀರಿ? ಏನೂ ಮಾಡಿಲ್ಲ, ಬರೇ ಮಾತು. ಕೆಲಸವೆಲ್ಲವೂ ಆ ಕಡೆಯಲ್ಲಿ ಮಾತ್ರ ಮಾಡಿರುವುದು.

(ಗೊಂದಲ)

ಉಪಾಧ್ಯಕ್ಷರು:- ರಾಯರೆಡ್ಡಿಯವರೆ, ನೀವು ಕುಳಿತುಕೊಳ್ಳಿ, ಅವರು ಉತ್ತರವನ್ನು ಹೇಳುತ್ತಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ:- ಅವರು ಏನು ಹೇಳುತ್ತಿದ್ದಾರೆ? ಅವರು ಶಂಕರಮಠದ ಕೀರ್ತನೆ ಹೇಳುತ್ತಿದ್ದಾರೆ. ನಮಗೆ ಶಂಕರ ಮಠದ ಕೀರ್ತನೆ ಬೇಡ. ಸರಿಯಾದ ಉತ್ತರ ಬೇಕು.

ಉಪಾಧ್ಯಕ್ಷರು: ನೀವು ಕುಳಿತುಕೊಳ್ಳಿ. ಮೊದಲು ಅವರು ಉತ್ತರ ಹೇಳಲಿ. ಆಮೇಲೆ ಬೇಕಾದರೆ ನೀವು ಕೇಳುವಿರಂತೆ.

ಶ್ರೀ ರಾಮಚಂದ್ರೇಗೌಡ:- ನಾನು ಹಿಂದಿನ ಸರ್ಕಾರಗಳು ಇದರ ಬಗ್ಗೆ ಚಿಂತನೆಯನ್ನು ಮಾಡಲಿಲ್ಲ ಎಂದು ಹೇಳಲಿಲ್ಲ. ಚಿಂತನೆ ಮಾಡಿದರು. ಯೂನಿವರ್ಸಿಟಿಯನ್ನು ಕೊಡಬೇಕಾದಂಥ ಜಾಗದಲ್ಲಿ ಯೂನಿವರ್ಸಿಟಿಗಳನ್ನು ಕೊಟ್ಟರು. ನೀರಾವರಿ ಯೋಜನೆ ಕೆಲಸ ಮಾಡಬೇಕಾದ ಜಾಗದಲ್ಲಿ ನೀರಾವರಿ ಕಾರ್ಯಕ್ರಮಗಳನ್ನು ಮಾಡಿದರು. ಅವರು ಮಾಡಲಿಲ್ಲವೆಂದು ನಾನು ಹೇಳಲಿಲ್ಲ. ಆದರೆ ವ್ಯವಸ್ಥಿತವಾಗಿ ನಂಜುಂಡಪ್ಪ ವರದಿಯನ್ನು ಹೇಗೆ ಜಾರಿ ಮಾಡಬೇಕು, ಯಾವ ದಾರಿಯಲ್ಲಿ ಮಾಡಬೇಕು, ಯಾವ ರೀತಿಯಲ್ಲಿ ಮಾಡಬೇಕು ಎನ್ನುವ ಬಗ್ಗೆ ಚಿಂತನೆಯನ್ನು ನಮ್ಮ ಸರ್ಕಾರ ಮೊಟ್ಟಮೊದಲನೆಯ ಬಾರಿಗೆ 1571.5 ಕೋಟಿ ರೂಪಾಯಿಗಳನ್ನು ಇಡುವ ಮುಖಾಂತರ.....

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್: ಯಾವ ಬ್ಯಾಂಕ್‌ನಲ್ಲಿ ಇಟ್ಟಿದ್ದೀರಿ? ಯಾವ ಅಕೌಂಟ್‌ನಲ್ಲಿ ಇಟ್ಟಿದ್ದೀರಿ? ಎಷ್ಟು ಖರ್ಚು ಮಾಡಿದ್ದೀರಿ? ಏನೇನು ಮಾಡಿದ್ದೀರಿ ಹೇಳಿ ಮತ್ತೆ.

ಶ್ರೀ ರಾಮಚಂದ್ರೇಗೌಡ:- ವರ್ಷ ಮುಗಿದಿದೆಯೇ ನೀವು ಈ ರೀತಿಯ ಪ್ರಶ್ನೆಗಳನ್ನು ಕೇಳಬೇಕಾಗಿರುವುದು 2008ಕ್ಕೆ ಹೊರತು ಇವತ್ತಲ್ಲ. ಈ ಪ್ರಶ್ನೆಯನ್ನು ನೀವು 2008ಕ್ಕೆ ಕೇಳಿ. ಕಾರ್ಯಕ್ರಮಗಳನ್ನು ಮಾಡಿದ್ದೀರ ಅಥವಾ ಇಲ್ಲವೆ ಎಂದು ಕೇಳಿ. ಈಗೇನು ಕೇಳುತ್ತೀರ? ವಸಂತ ಕಾಲ ಬಂದಾಗಲೇ ಕಾಗೆ ಯಾವುದು ಎಂದು ಗೊತ್ತಾಗುತ್ತದೆ, ಕೋಗಿಲೆ ಯಾವುದು ಎಂದು ಗೊತ್ತಾಗುತ್ತದೆ. ಕಾಗೆಯೂ ಕಪ್ಪಗಿದೆ, ಕೋಗಿಲೆಯೂ ಕಪ್ಪಗಿದೆ.

ಶ್ರೀ ಬಸವರಾಜ ರಾಯರೆಡ್ಡಿ:- ಈ ಕವಿತೆ, ಕೀರ್ತನೆ ನಮಗೆ ಬೇಕಾಗಿಲ್ಲ. ನಮಗೆ ಸ್ಪಷ್ಟವಾದ ಉತ್ತರ ಕೊಡಿ.

ಶ್ರೀ ರಾಮಚಂದ್ರೇಗೌಡ:- ನಮಗೆ ನಾನು ಉತ್ತರ ಕೊಡುತ್ತೇನೆ. ವಸಂತಕಾಲೇ ಸಂಪ್ರಾಪ್ತೇ ಕಾಕ: ಕಾಕ: ಪಿಕ: ಶುಕ: , ಕಾಕ: ಕೃಷ್ಣ:, ಪಿಕ: ಕೃಷ್ಣ:. ಕಾಗೆಯೂ ಕಪ್ಪಗಿದೆ, ಕೋಗಿಲೆಯೂ ಕಪ್ಪಗಿದೆ. ಆದರೆ ಕಾಗೆಯೇ

ಬೇರೆ, ಕೋಗಿಲೆಯೇ ಬೇರೆ ಎನ್ನುವಂಥ ಅಂಶವನ್ನು ನಾವು ಇವತ್ತು ನಮ್ಮ ಗಮನಕ್ಕೆ ತರುತ್ತಿದ್ದೇವೆ.

ಶ್ರೀ ಎ.ವಿ. ಉಮಾಪತಿ:- ಕೋಳಿ ಕೂಗಿದರೆ ಬೆಳಗಾಗುತ್ತದೆ ಎನ್ನುತ್ತಾರೆ. ಆದರೆ ಕೋಳಿ ಕೆಲವೊಮ್ಮೆ ಮಧ್ಯಾಹ್ನದ ಸಮಯದಲ್ಲಿಯೂ ಕೂಗುತ್ತದೆ.

ಶ್ರೀ ರಾಮಚಂದ್ರೇಗೌಡ:- 2002 ರಿಂದ 2004 ರವರೆಗೂ ಕೂಗಿದ್ದು ಕೋಳಿ. ಈಗ ಕೋಗಿಲೆ ಕೂಗುತ್ತಿದೆ.

ಶ್ರೀ ಧರ್ಮಸಿಂಗ್:- ಮಾನ್ಯ ಉಪಾಧ್ಯಕ್ಷರೆ, ಆಭಾಗದ ಜನತೆಯ ಆಶೋತ್ತರಗಳ ಬಗ್ಗೆ ಇವತ್ತು ನಾವು ಬಹಳ ಗಂಭೀರವಾಗಿ ಚರ್ಚೆಯನ್ನು ಮಾಡಿದ್ದೇವೆ. ಇವತ್ತು ನೀವೇನು ಬಜೆಟ್‌ನಲ್ಲಿ 1,571 ಕೋಟಿ ರೂಪಾಯಿಗಳನ್ನು ನಂಜುಂಡಪ್ಪ ವರದಿ ಅನುಷ್ಠಾನಕ್ಕೆಂದು ಇಡುತ್ತೇವೆಂದು ಇಲ್ಲಿಯ ಜೊತೆಗೆ ಈ ಬಗ್ಗೆ ಘೋಷಣೆಯನ್ನು ನೀವು ಬೆಳಗಾಂನಲ್ಲಿ ನಡೆದ ಅಧಿವೇಶನದಲ್ಲಿಯೂ ಮಾಡಿದ್ದೀರಿ. ಗಡಿ ಭಾಗದಲ್ಲಿ ಆಗತಕ್ಕಂಥ ಅಧಿವೇಶನದಲ್ಲಿ ನಂಜುಂಡಪ್ಪನವರ ವರದಿ ಅನುಷ್ಟಾನಕ್ಕೆ ತರತಕ್ಕಂಥ ರೀತಿಯಲ್ಲಿ ಇಟ್ಟಿದ್ದೇನೆ ಎಂದು ಹೇಳಿದ್ದೀರಿ. ಆದರೆ ಇವತ್ತು ನೀವು ಪ್ರತಿಯೊಂದು ಇಲಾಖೆಯಲ್ಲಿ ಕಡಿತ ಮಾಡಿ ಕೊಡುತ್ತಿದ್ದೀರಿ. ಆದುದರಿಂದ ಇದಕ್ಕೆ ಬಜೆಟ್‌ನಲ್ಲಿ ಎಷ್ಟು ಪ್ರಾವಿಶನ್ ಇದೆ ಅದಕ್ಕೆ ಹೆಚ್ಚುವರಿಯಾಗಿ ಕೊಡತಕ್ಕಂಥ ರೀತಿಯಲ್ಲಿ ನೀವು ಮಾಡಬೇಕಾಗಿದೆ. ನಾವೇನು ಹೇಳುತ್ತಿದ್ದೇವೆಂದರೆ ನಂಜುಂಡಪ್ಪನವರ ವರದಿಯನ್ನು ಅನುಷ್ಟಾನಕ್ಕೆ ತರತಕ್ಕಂಥ ರೀತಿಯಲ್ಲಿ ಉತ್ತರ ಕರ್ನಾಟಕ ಭಾಗದ ಪ್ರಗತಿಗೆ ಇವತ್ತು ಧಕ್ಕೆಯಾಗುತ್ತಿದೆ. ಆ ಭಾಗದ ಜನರಿಗೆ ನೀವು ವಂಚನೆ ಮಾಡಿದ್ದೀರಿ. ಹಣ ಬಿಡುಗಡೆ ಮಾಡಿಲ್ಲವೆಂದು ನಮ್ಮ ಆಪಾದನೆ ಇದೆ. ನಾವೇ ಈ ಆಪಾದನೆಯನ್ನು ಮಾಡಿಲ್ಲ. ಮೊನ್ನೆ ಕರೆದಂಥ ಶಾಸಕರ ಸಭೆಯಲ್ಲಿ ತಮ್ಮ ಗೃಹ ಮಂತ್ರಿಗಳು ಕೂಡ ಹೇಳಿದ್ದಾರೆ. "ನಾನು ಮಂತ್ರಿಯಾಗಿ ಅಲ್ಲ, ಶಾಸಕನಾಗಿ ಮಾತನಾಡುತ್ತಿದ್ದೇನೆ, ಇವತ್ತು ನಮ್ಮ ಸರ್ಕಾರ ಈ ಭಾಗದ ಜನತೆಗೆ ಹೆಚ್ಚಿನ ಹಣವನ್ನು ಕೊಟ್ಟಿಲ್ಲ" ಎಂದು ಹೇಳುತ್ತಾರೆ. ಅದಕ್ಕೆ ನಾವು ಇವತ್ತು ನಿಯಮ 69ರ ಚರ್ಚೆಯನ್ನು ಪ್ರಾರಂಭ ಮಾಡಿದ್ದೇವೆ. ಸರ್ಕಾರದಿಂದ ನ್ಯಾಯವನ್ನು ಕೇಳುತ್ತಿದ್ದೇವೆ. ಸರ್ಕಾರ ಇದಕ್ಕೆ

ಸರಿಯಾದ ರೀತಿಯಲ್ಲಿ ಉತ್ತರವನ್ನು ಕೊಡಬೇಕು. ನಿಮ್ಮ ಕವಿತೆಯನ್ನು, ನಿಯಮ ಪ್ರವಚನವನ್ನು ಕೇಳುವುದಕ್ಕೆ ನಾವು ಬಂದಿಲ್ಲ. ಇವತ್ತು ನೇರವಾಗಿ ಸದನದಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಬೇಕು....

ಶ್ರೀ ರಾಮಚಂದ್ರೇಗೌಡ: ನೀವು ಪ್ರಶ್ನೆ ಮಾಡಿದ ಮೇಲೆ ಪ್ರವಚನವನ್ನು ಕೇಳಬೇಕು, ಎಲ್ಲಾ ಕೂಡ ಕೇಳಬೇಕು.

ಶ್ರೀ ಧರ್ಮಸಿಂಗ್: ಏಕೆ ಕೇಳಬೇಕು? ಜನರಿಗೆ ನೀರಿಲ್ಲ, ಜನರಿಗೆ ಕೆಲಸ ಇಲ್ಲ. ಜನರು ಸಾಯುತ್ತಿದ್ದಾರೆ. ಬಡತನ ರೇಖೆಗೆ ಒಳಗಾಗಿರತಕ್ಕಂಥ ಜನರ ಗತಿ ಏನು? ಅದು ಬೇಕಾಗಿದೆ. ಇವತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಬಂದು ಸಮರ್ಪಕವಾದಂತಹ ಉತ್ತರವನ್ನು ಕೊಡಬೇಕಾಗಿತ್ತು, ಕೊಡಲಿಲ್ಲ. ಇವತ್ತು Planning Ministerಗೆ ಕೂಡ ಸಂಬಂಧಪಟ್ಟಂತಹ ವಿಚಾರ ಇದೆ. ನಾವೆಲ್ಲರೂ ಕೂಡ ಇದಕ್ಕೆ ಪ್ರತಿಭಟನೆಯನ್ನು ಮಾಡುತ್ತಿದ್ದೇವೆ. ಸರ್ಕಾರ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಉತ್ತರ ಕೊಡುತ್ತಿಲ್ಲ. ಆ ಭಾಗದ ಜನತೆಗೆ ಅನ್ಯಾಯವಾಗುತ್ತದೆ ಎಂದು ಪ್ರತಿಭಟಿಸಿ ನಾವು well ಗೆ ಬರುತ್ತೇವೆ.

(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರು ಹಾಗೂ ನಾಮಾಂಕಿತ ಸದಸ್ಯರಾದ ಶ್ರೀ ಐವಾನ್ ನಿಗ್ಲಿಯವರು ಧರಣಿ ಮಾಡಲು ಬಾವಿಗೆ ಬಂದರು)

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಯರೆಡ್ಡಿಯವರೆ ಒಂದು ನಿಮಿಷ ಕೇಳಬೇಕು. ನಂಜುಂಡಪ್ಪ ವರದಿಯಲ್ಲಿ ಜೇವರ್ಗಿ, ಸೊರಬ, ಚಿಂಚೋಳಿ ಸೇರಿದೆ. ನಂಜುಂಡಪ್ಪ ವರದಿಯಲ್ಲಿ ಎಲ್ಲಾ ಮುಖ್ಯಮಂತ್ರಿಗಳಿಗೆ ಗೊತ್ತಿರುವಂತಹ ತಾಲ್ಲೂಕುಗಳು ಇವತ್ತು ಸೇರಿದೆ. ಜೇವರ್ಗಿ ಕೂಡ ಸೇರಿದೆ. ನೀವು ರಾಜ್ಯಕ್ಕೆ ಒಳ್ಳೆಯದು ಮಾಡಲಿಲ್ಲ.... ನಿಮ್ಮ ಕ್ಷೇತ್ರಕ್ಕೂ ಒಳ್ಳೆಯದು ಮಾಡಲಿಲ್ಲ. ಹಾಗಾದರೆ ಇವರು ಮಾಡಿದ್ದೇನು?

(ಗೊಂದಲ)

ಉಪಾಧ್ಯಕ್ಷರು: ಜ್ಞಾನೇಂದ್ರರವರೆ, ತಾವು ಕುಳಿತುಕೊಳ್ಳಿ.

ಶ್ರೀ ಆರಗ ಜ್ಞಾನೇಂದ್ರ: ಈಗ ನಂಜುಂಡಪ್ಪ ವರದಿಯನ್ನು ಮುಂದಿಟ್ಟುಕೊಂಡು ಈ ಸರ್ಕಾರದಿಂದ ಹಣಬೇಕೆಂದು ಕೇಳುವುದಕ್ಕೆ ಹೊರಟಿದ್ದಾರೆ. ನಿಮಗೆ ನಾಚಿಕೆಯಾಗಬೇಕು.

ಉಪಾಧ್ಯಕ್ಷರು: ಡಾ: ಶರಣಪ್ರಕಾಶ್ ಪಾಟೀಲ್‌ರವರೆ, ಅವರು ಏನು ಉತ್ತರ ಕೊಡುತ್ತಾರೆಂದು ಪೂರ್ಣವಾಗಿ ಕೇಳಲೇ ಇಲ್ಲ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಇವರ ಆಡಳಿತ ಇದ್ದಾಗ ಏನು ಮಾಡಿದ್ದಾರೆ? ಕರ್ನಾಟಕ ರಾಜ್ಯಕ್ಕೂ ಏನೂ ಮಾಡಲಿಲ್ಲ, ಇವರ ಕ್ಷೇತ್ರವಾದ ಜೇವರ್ಗಿಗೂ ಕೂಡ ಏನೂ ಮಾಡಲಿಲ್ಲ. ಇವರಿಗೆ ನಾಚಿಕೆಯಾಗಬೇಕು. ಇವರು ಈ ಸರ್ಕಾರದ ಹತ್ತಿರ ಡಾ: ನಂಜುಂಡಪ್ಪ ವರದಿಯನ್ನು ಹಿಡಿದುಕೊಂಡು ಬಂದಿದ್ದಾರೆ.

ಉಪಾಧ್ಯಕ್ಷರು: ಈಗ Finance Minister ಅನ್ನು ಕರೆಸುತ್ತೇವೆ. ಅವರು Council ನಲ್ಲಿ reply ಕೊಡುವುದಕ್ಕೆ ಹೋಗಿದ್ದಾರೆ. ಅವರು ಬರುತ್ತಾರೆ, ನೀವು ನಿಮ್ಮ seat ಗಳಿಗೆ ಹೋಗಿ ಕುಳಿತುಕೊಳ್ಳಿ. ಅವರು ಬರುತ್ತಾರೆ, ಬಂದ ಕೂಡಲೇ ಉತ್ತರ ಕೊಡಿಸುತ್ತೇನೆ.

(ಈ ಹಂತದಲ್ಲಿ ಬಾವಿಯಲ್ಲಿ ನಿಂತುಕೊಂಡು ಸದಸ್ಯರು ಘೋಷಣೆಯನ್ನು ಕೂಗುತ್ತಿದ್ದರು)

ಉಪಾಧ್ಯಕ್ಷರು: ಹತ್ತು ನಿಮಿಷ ಅವರು ಬರುತ್ತಾರೆ. ದಯವಿಟ್ಟು ನಿಮ್ಮ seat ಗಳಿಗೆ ಹೋಗಿ.

(ಗೊಂದಲ)

ಉಪಾಧ್ಯಕ್ಷರು: ತಾವು ತಮ್ಮ seat ಗಳಿಗೆ ಹೋದರೆ ಹತ್ತು ನಿಮಿಷದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಬರುತ್ತಾರೆ. ಈಗ ಅಲ್ಲಿ Calling Attention ಇದೆಯಂತೆ, ಅಲ್ಲಿ ಅವರು reply ಕೊಡುತ್ತಿದ್ದಾರೆ. ಅವರು ಹತ್ತು ಹದಿನೈದು ನಿಮಿಷದಲ್ಲಿ ಬರುತ್ತಾರೆ, ಅಲ್ಲಿಯವರೆಗೆ ಮಾನ್ಯ ರಾಮಚಂದ್ರೇಗೌಡರು ಉತ್ತರ ಕೊಡಲಿ. ತಾವು ದಯವಿಟ್ಟು ತಮ್ಮ seat ಗಳಿಗೆ ಹೋದರೆ ಒಳ್ಳೆಯದು.

(ಗೊಂದಲ)

ಉಪಾಧ್ಯಕ್ಷರು: ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನದ ಕಲಾಪವು 6.00 ಗಂಟೆ 46 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಹತ್ತು ನಿಮಿಷದ ನಂತರ ಸೇರಲು ನಿಶ್ಚಯಿಸಿತು)

(ಸದನದ ಕಲಾಪವು ಪುನಃ ರಾತ್ರಿ 8.10 ಗಂಟೆಗೆ ಪ್ರಾರಂಭ ವಾದಾಗ ಸನ್ಮಾನ್ಯ ಉಪಾಧ್ಯಕ್ಷರು ಶ್ರೀ ಎನ್.ವೈ. ಗೋಪಾಲಕೃಷ್ಣ ಅಧಕ್ಷರ ಪೀಠದಲ್ಲಿ ಉಪಸ್ಥಿತರಾದರು)

(ಮಾನ್ಯ ವಿರೋಧ ಪಕ್ಷದ ನಾಯಕರು ಹಾಗು ಸದಸ್ಯರು ಧರಣಿಯಲ್ಲಿ ಭಾಗವಹಿಸಿದ್ದರು)

ಉಪಾಧ್ಯಕ್ಷರು:- ದಯಮಾಡಿ ತಾವೆಲ್ಲಾ ತಮ್ಮ ಸ್ಥಾನಗಳಿಗೆ ಹಿಂತಿರುಗಬೇಕಾಗಿ ವಿನಂತಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೆ, ನಾನು ನಂಜುಂಡಪ್ಪ ವರದಿಗೆ ಬೆಂಬಲವನ್ನು ಸೂಚಿಸಿ ಧರಣಿಯಲ್ಲಿ ಪಾಲ್ಗೊಳ್ಳುತ್ತೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಹ ಧರಣಿಯಲ್ಲಿ ಪಾಲ್ಗೊಂಡಿದ್ದರು)

17. <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು</u>

ವಿಷಯ: ಚಿಕ್ಕನಾಯಕನ ಹಳ್ಳಿಯಲ್ಲಿ ಶಾಲಾಕಟ್ಟಡ ಬಿದ್ದು ಮಕ್ಕಳು ಮೃತಪಟ್ಟಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಸನ್ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು statement ಮಾಡಲಿಕ್ಕೆ ಅವಕಾಶ ಕೊಡಿ. ನಮ್ಮ ಚಿಕ್ಕನಾಯಕನಹಳ್ಳಿಯಲ್ಲಿ ಒಂದು ಶಾಲಾ ಕಟ್ಟಡ ಕುಸಿದು ಬಿದ್ದಿರುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದರೆಂದು ಮಾನ್ಯ ಗೃಹ ಸಚಿವರಲ್ಲಿ ಕೇಳ ಬಯಸುತ್ತೇನೆ.